# ವೀರರ ಆಟದ ಸೂಚನೆಗಳು

ವಿದ್ಯಾರ್ಥಿಗಳು ತಮ್ಮ ಜೀವಿತಗಳಲ್ಲಿ ಎದುರಾಗುವ ನಿಜವಾದ ಪರಿಸ್ಥಿತಿಗಳಲ್ಲಿ ದೈವೀಕ ಸ್ವಭಾವಗಳೊಂದಿಗೆ ಬೆರೆಯುವದು ಹೇಗೆ ಎಂಬದನ್ನು ಕಲಿಸುವ ಈ ಆಟವನ್ನು ಅವರು ಆಡಬಹುದು. ಕಾರ್ಡ್ ಗಳನ್ನು ಹಾಜರಾತಿಗೆ ಬಹುಮಾನವಾಗಿ ಉಪಯೋಗಿಸುವ ಮೂಲಕ, ಮಕ್ಕಳಿಗೆ ಪ್ರತಿ ವಾರ ಬರುವಂತೆ ಮತ್ತು ಒಬ್ಬರೊಂದಿಗೊಬ್ಬರು ಆಟವಾಡುವಲು ಸಂಗ್ರಹಿಸುವಂತೆ ಅವರಿಗೆ ಹೇಳಬಹುದು ಎಂಬದು ನಮ್ಮ ಸಲಹೆಯಾಗಿದೆ.

## ಸೂಚನೆಗಳು:

ಪ್ರತಿ ವಾರ ತಪ್ಪದೇ ತರಗತಿ ಬಂದಿರುವ ವಿದ್ಯಾರ್ಥಿಗಳಿಗೆ ಅವರ ವೀರ ಮತ್ತು ವಿಶೇಷತೆಯುಳ್ಳ ಕಾರ್ಡ್ ಕೊಡಿರಿ. ಕಾರ್ಡ್ ಹಿಂದೆ ಅದನ್ನು ಕೊಡುವವರ ಹೆಸರು ಬರೆಯಿರಿ ಎಂಬದು ನಮ್ಮ ಸಲಹೆಯಾಗಿದೆ. ಆಟವಾಡುವಾಗ, ಮಕ್ಕಳು ಜೋಡಿಗಳಾಗಿರಬೇಕು. ಮತ್ತು ಆಟದ ಪ್ರತಿಯೊಂದು ಸುತ್ತಿನಲ್ಲಿ, ಕೆಳಗೆ ಕೊಡಲಾಗಿರುವ ಕಾರ್ಯಗಳನ್ನು ಮಾಡಿರಿ:

- ಅಧ್ಯಾಪಕನು ಒದಗಿಸಲಾಗಿರುವ ಪರಿಸ್ಥಿತಿಗಳು / ಪ್ರಶ್ನೆಗಳಲ್ಲಿ ಒಂದನ್ನು ಓದಬೇಕು ಆದರೆ ಆ ಪರಿಸ್ಥಿತಿಯಲ್ಲಿ ಯಾವ ಗುಣವನ್ನು ಪ್ರದರ್ಶಿಸಬೇಕು ಎಂದು ಹೇಳಬಾರದು
- ಆಟಗಾರರು ಆ ಪರಿಸ್ಥಿತಿಯಲ್ಲಿ ಯಾವ ಗುಣವನ್ನು ಪ್ರದರ್ಶಿಸಬೇಕು ಎಂಬದನ್ನು ಯೋಚಿಸಬೇಕು ಮತ್ತು ಆ ಗುಣದನುಸಾರವಾಗಿ ತಮ್ಮ ವೀರರಲ್ಲಿ ಯಾರಿಗೆ ಹೆಚ್ಚು ಅಂಕಗಳಿವೆ ಎಂಬದನ್ನು ಹುಡುಕಬೇಕು. ಆಟಗಾರರು ಗೆಲ್ಲಲು ತಮಗೆ ಸಹಾಯ ಮಾಡುವ ಸಲುವಾಗಿ ಆಯ್ಕೆಯುಳ್ಳ ವಿಶೇಷತೆ ಕಾರ್ಡ್ ಗಳನ್ನು ಆರಿಸಬಹುದು.
- ಪ್ರತಿಯೊಬ್ಬ ಎದುರಾಳಿಗಳು ತಾವು ಗೆಲ್ಲುತ್ತೇವೆಂದು ನೆನೆಸುವ ವೀರ ಮತ್ತು ವಿಶೇಷತೆ ಕಾರ್ಡ್ ಹೊಂದಾಣಿಕೆ ಆರಿಸಿದ ನಂತರ, ಮೂರು ಎಣಿಸಿದ ತಕ್ಷಣ ಅವರು ಒಂದೇ ಸಮಯದಲ್ಲಿ ಅವರು ಮೇಜಿನ ಮಧ್ಯದಲ್ಲಿ ತಮ್ಮ ಕಾರ್ಡ್ ಗಳನ್ನು ಮುಖಪುಟ ಮಾಡಿ ಇಡಬೇಕು. ಗಮನಿಸಿರಿ: ನೀವು ಆಡುವ ಮೊದಲ ಕೆಲವು ಸುತ್ತುಗಳಲ್ಲಿ, ಹೇಗೆ ಆಟವಾಡಬೇಕೆಂದು ಯೋಚಿಸಲು ಮಕ್ಕಳಿಗೆ ಹೆಚ್ಚು ಸಮಯ ಕೊಡಿರಿ. ಅದಾದ ನಂತರ, ಅದನ್ನು ಮತ್ತಷ್ಟು ಆಕರ್ಷಕವನ್ನಾಗಿಸಲು ತೀರ್ಮಾನ ತೆಗೆದುಕೊಳ್ಳುವಂತೆ ಅವರಿಗೆ ಹೇಳಿರಿ.
- ವೀರರ ಕಾರ್ಡ್ ಮತ್ತು ವಿಶೇಷತೆ ಕಾರ್ಡ್ ಗಳಲ್ಲಿ ಅಂಕಗಳನ್ನು ಲೆಕ್ಕ ಮಾಡುವಾಗ ಸರಿಯಾದ ಗುಣದನುಸಾರ ಯಾವ ಆಟಗಾರನಿಗೆ ಹೆಚ್ಚು ಅಂಕಗಳಿರುತ್ತವೆಯೋ ಆತನು ಗೆಲ್ಲುತ್ತಾನೆ. ಪ್ರತಿಯೊಂದು ಮಗು ಎಷ್ಟು ಸುತ್ತುಗಳನ್ನು ಗೆಲ್ಲುತ್ತದೆ ಎಂಬದನ್ನು ಎಣಿಸುತ್ತಾ, ಅಂಕಗಳನ್ನು ಬರೆದಿಟ್ಟುಕೊಳ್ಳಿರಿ.
- ಪ್ರತಿಯೊಂದು ಮಗು ಆಟದಲ್ಲಿ ಒಮ್ಮೆ ಮಾತ್ರವೇ ಆಡಬಹುದು. ಪ್ರತಿಯೊಂದು ಸುತ್ತಿನ ನಂತರ, ಪ್ರತಿಯೊಬ್ಬ ಆಟಗಾರನು ತಾವು ಆಡಿರುವ ಕಾರ್ಡ್ ತೆಗೆದುಕೊಳ್ಳಬೇಕು ಮತ್ತು ಅದನ್ನು ಕೆಳಮುಖ ಮಾಡಿ ಇಡಬೇಕು.
- ಆಟ ಆಡಲು ಮಕ್ಕಳಿಗೆ ಕಾರ್ಡ್ ಸಿಗದೆ ಮುಗಿಯುವ ತನಕ ಹೆಚ್ಚು ಸುತ್ತುಗಳನ್ನು ಆಡಿಸಿರಿ.

ಹೆಚ್ಚು ಸುತ್ತುಗಳನ್ನು ಆಡಿದ ಆಟಗಾರ ಜಯಶಾಲಿಯಾಗಿದ್ದಾನೆ. ಮಕ್ಕಳ ಎದುರಾಳಿಯನ್ನು ಬದಲಾಯಿಸಿ ಮತ್ತೆ ಆಡಿಸಿರಿ.

## ಹಂತ ೧ ಕಾರ್ಡ್ಸ್

- ಸೃಷ್ಟಿ
- ಬೈಬಲ್ (ಪೆಂಟಾಟಚ್)
- ನೋಹ
- ಅಬ್ರಹಾಮ
- ಐಸಾಕ್
- ಜಾಕೋಬ್
- ಜೋಸ್
- ಮೋಶೆ
- ಬೈಬಲ್ (ಐತಿಹಾಸಿಕ ಪುಸ್ತಕಗಳು)
- ಕರ್ತನ ಖಡ್ಗ
- ಯೆಹೋಶುವ
- ಹಿಡನ್ ಚಿನ್ನ






## ವೀರರ ಕಾರ್ಡ್ಸ್:

ಎರಡು ರೀತಿಯ ಕಾರ್ಡ್ ಗಳಿರುತ್ತವೆ: ವೀರರ ಕಾರ್ಡ್ ಮತ್ತು ವಿಶೇಷತೆ ಕಾರ್ಡ್. ವೀರರ ಕಾರ್ಡ್ ಸತ್ಯವೇದದಿಂದ ಆರು ಗುಣಗಳಾದ, **ಬಲ, ಯಥಾರ್ಥತೆ, ವಿಧೇಯತೆ, ದೀನತೆ, ಹೃದಯ ಮತ್ತು ನಂಬಿಕೆಯ** ಗುಣಗಳಿರುವ ವ್ಯಕ್ತಿಗಳನ್ನು ಸೂಚಿಸುತ್ತದೆ.




ಸತ್ಯವೇದದ ಪ್ರತಿಯೊಬ್ಬ ವೀರನ ಜೀವಿತದ ವಿಶ್ಲೇಷಣೆಯಿಂದ ಮೇಲೆ ಕೊಡಲಾಗಿರುವ ಪ್ರತಿಯೊಂದು ಗುಣಗಳಿಗೆ ೧೦೦ ಅಂಕಗಳನ್ನು ಹೊಂದಿರುತ್ತಾನೆ. ಒಂದುವೇಳೆ ವೀರನಿಗೆ ಯಾವುದಾದರು ನಿರ್ದಿಷ್ಟವಾದ ಕ್ಷೇತ್ರದಲ್ಲಿ ತನ್ನನ್ನು ನಿರೂಪಿಸಿಕೊಳ್ಳುವ ಅವಕಾಶ ದೊರೆಯದೆ ಹೋಗಿದ್ದರೆ, ಆ ಕ್ಷೇತ್ರದಲ್ಲಿ ಅವನಿಗೆ ಯಾವ ಅಂಕಗಳೂ ಸಿಗುವದಿಲ್ಲ. ಒಬ್ಬ ವೀರರಿಗೆ ಒಂದೇ ಗುಣಕ್ಕೆ ಒಂದೇ ರೀತಿಯ ಅಂಕಗಳಿರಲು ಸಾಧ್ಯವಿಲ್ಲ. ಒಂದುವೇಳೆ ಒಬ್ಬ ವೀರನು ಯಾವುದಾದರೊಂದು ಕ್ಷೇತ್ರದಲ್ಲಿ ಬಲಹೀನತೆಯನ್ನು ತೋರಿಸುವದಾದರೆ, ಆ ಕ್ಷೇತ್ರದಲ್ಲಿ ಬಲಹೀನತೆಯನ್ನು ತೋರದಿರುವ ಮತ್ತೊಬ್ಬ ವೀರನಿಗಿಂತ ಕಡಿಮೆ ಅಂಕಗಳು ಸಿಗುತ್ತವೆ.

ಉದಾಹರಣೆಗಳು: ಹೇಬೇಲನ ಜೀವಿತದಲ್ಲಿ ನಾವು ಹೆಚ್ಚಿನ ನಂಬಿಕೆಯನ್ನು ನೋಡುವದಿಲ್ಲವಾದ್ದರಿಂದ, ನಂಬಿಕೆಗೆ ಅವನು ಕೇವಲ ೫೦ ಅಂಕಗಳನ್ನು ಮಾತ್ರವೇ ಪಡೆದನು. ಅವನು ತನ್ನ ಜೀವಿತದ ಪ್ರಾರಂಭದಲ್ಲಿಯೇ ಕೊಲ್ಲಲ್ಪಟ್ಟದ್ದರಿಂದ, ಬಲದ ವಿಷಯದಲ್ಲಿ ಕೇವಲ ೧ ಅಂಕ ಪಡೆದನು. ಅದರೆ ಅವನು ಹೃದಯದ ವಿಷಯದಲ್ಲಿ ೯೦ ಅಂಕಗಳನ್ನು ಪಡೆದನು ಯಾಕಂದರೆ ಅವನು ದೇವರು ನಿಜವಾಗಿ ಬಯಸುವದನ್ನು ಕೊಟ್ಟನು ಮತ್ತು ದೇವರ ಮೇಲೆ ತನಗಿರುವ ಪ್ರೀತಿಯನ್ನು ತೋರಿಸಿದನು. ಅಬ್ರಹಾಮನು ತನ್ನ ಹೆಂಡತಿಯನ್ನು ತಂಗಿಯೆಂದು ಕರೆದನು ಆದ್ದರಿಂದ ಯಥಾರ್ಥತೆಯ ವಿಷಯದಲ್ಲಿ ಅಂಕಗಳನ್ನು ಕಳೆದುಕೊಂಡನು. ನೋಹ ಒಳ್ಳೆಯ ಹೃದಯದ ವಿಷಯದಲ್ಲಿ ಅಂಕಗಳನ್ನು ಕಳೆದುಕೊಂಡಿದ್ದಾನೆ ಯಾಕಂದರೆ ಅವನು ಜಲಪ್ರಳಯದ ನಿಮಿತ್ತ ಸಾಯುವವರಾಗಿದ್ದ ಲಕ್ಷಾಂತರ ಜನರಿಗಾಗಿ ಪ್ರಾರ್ಥಿಸಿದನು ಅಥವಾ ಅವರನ್ನು ರಕ್ಷಿಸಲು ಪ್ರಯತ್ನಿಸಿದನು ಎಂಬದಾಗಿ ಎಲ್ಲಿಯೂ ಬರೆಯಲ್ಪಟ್ಟಿಲ್ಲ. ಮೋಶೆ ದೀನತೆಯ ವಿಷಯದಲ್ಲಿ ನೂರಕ್ಕೆ ನೂರು ಅಂಕ ಪಡೆದಿದ್ದಾನೆ ಯಾಕಂದರೆ ಯಾಕಂದರೆ ಭೂಲೋಕದಲ್ಲಿ ಅವನಷ್ಟು ಸಾತ್ವಿಕರಾಗಿ ಜೀವಿಸಿದವರು ಯಾರೂ ಇಲ್ಲ ಎಂದು ಸತ್ಯವೇದ ಹೇಳುತ್ತದೆ. ಯೋಸೇಫನಿಗೆ ದೀನತೆಯ ವಿಷಯದಲ್ಲಿ ಯಾವ ಅಂಕಗಳೂ ಇಲ್ಲ ಯಾಕಂದರೆ ಅವರು ಅವಶ್ಯವಿಲ್ಲದಿದ್ದರೂ ತನ್ನ ಸಹೋದರರಿಗೆ ಕನಸಿನ ಬಗ್ಗೆ ಹೇಳಿದನು ಮತ್ತು ಅವನು ಪ್ರಧಾನ ಮಂತ್ರಿಯಾದ ನಂತರ ಅವನಲ್ಲಿ ಹೆಚ್ಚಾಗಿ ದೀನತೆಯನ್ನು ಕಾಣಲು ಆಗುವದಿಲ್ಲ. ಅಬ್ರಹಾಮನು ವಿಧೇಯತೆಯಲ್ಲಿ ೯೭ ಅಂಕ ಪಡೆದಿದ್ದಾನೆ ಯಾಕಂದರೆ ಕರ್ತನ ಮಾತಿನ ಪ್ರಕಾರ ಅವನು ತನ್ನ ಸ್ವದೇಶವನ್ನು ಬಿಟ್ಟನು ಮತ್ತು ಸೊದೊಮ್ ಗೊಮೊರ ಪಟ್ಟಣವನ್ನು ಬಿಡುವ ಮೂಲಕ ವಿಧೇಯತೆಯನ್ನು ತೋರಿದನು. ಆದರೆ ಅವನು ನೂರಕ್ಕೆ ನೂರು ಅಂಕಗಳನ್ನು ಪಡೆಯಲಿಲ್ಲ ಯಾಕಂದರೆ ನೋಹ, ಸುಮಾರು ೧೦೦ ವರ್ಷಗಳ ಕಾಲ ಮಳೆಯ ಮುನ್ಸೂಚನೆಯೇ ಇಲ್ಲದೆ ನಾವೆ ಕಟ್ಟುವ ಮೂಲಕ ಹೆಚ್ಚು ವಿಧೇಯತೆಯನ್ನು ತೋರಿದನು.

## ವಿಶೇಷತೆ ಕಾರ್ಡ್:




ವಿಶೇಷತೆ ಕಾರ್ಡ್ ಆಟವಾಡುತ್ತಿರುವ ಕಾರ್ಡ್ ನ ಮೌಲ್ಯವನ್ನು ಬದಲಾಯಿಸುತ್ತದೆ. ನೀವು ಮತ್ತು ನಿಮ್ಮ ಎದುರಾಳಿ ಒಬ್ಬನೇ ವೀರರನ್ನು ಆಯ್ಕೆ ಮಾಡಿಕೊಂಡರೆ ಈ ಕಾರ್ಡ್ ಗಳು ಜಯಿಸಲು ನಿಮಗೆ ಸಹಾಯ ಮಾಡುತ್ತವೆ.

- **ಸತ್ಯವೇದ:** ನೀವು ಆಯ್ಕೆ ಮಾಡುವ ಗುಣಮಟ್ಟದನುಸಾರವಾಗಿ ಸೂಚಿಸುವ ಅಂಶಗಳಿಗನುಸಾರ ಅಂಕಗಳನ್ನು ಹೆಚ್ಚಿಸಿರಿ. ವೀರನು ಸಿಗುವ ಸತ್ಯವೇದದ ಭಾಗವನ್ನೇ ಉಪಯೋಗಿಸಲು ಎಚ್ಚರ ವಹಿಸಿರಿ.
- **ಅಡಕವಾಗಿರುವ ಚಿನ್ನ:** ನಿಮ್ಮ ಎದುರಾಳಿಯ ವೀರನಿಂದ ೧೦ ಅಂಕಗಳನ್ನು ಕಡಿತ ಮಾಡಿರಿ.
- **ಪ್ರಾರ್ಥನೆ:** ನಿಮ್ಮ ವೀರನ ನಂಬಿಕೆಗೆ ೧೦ ಅಂಕಗಳನ್ನು ಸೇರಿಸಿರಿ.
- **ಒಡಂಬಡಿಕೆಯ ಮಂಜೂಷ:** ನಿಮ್ಮ ಎದುರಾಳಿಯ ಬಲವನ್ನು ಸೊನ್ನೆಗಿಳಿಸಿರಿ.
- **ಬಿದ್ದುಹೋದ ಮರ:** ನಿಮ್ಮ ಎದುರಾಳಿಯ ದೀನತೆಯನ್ನು ೨೦ ಅಂಕಗಳು ಕಡಿಮೆ ಮಾಡಿರಿ.
- **ಸೃಷ್ಟಿ:** ನಾವು ಗೆಲ್ಲುತ್ತೇನೆ ಎಂದು ನಿಮಗೆ ಅನ್ನಿಸುವ ಸುತ್ತಿನಲ್ಲಿ ಇದನ್ನು ಉಪಯೋಗ ಮಾಡಿರಿ. ಒಂದುವೇಳೆ ನೀವು ಗೆಲ್ಲುವದಾದರೆ ಹಿಂದೆ ಉಪಯೋಗ ಮಾಡಿರುವ ೩ ಕಾರ್ಡ್ ಗಳನ್ನು ನೀವು ಬಿಡಿಸಬಹುದು.
- **ಕರ್ತನ ಖಡ್ಗ:** ಸುತ್ತನ್ನು ತಾನಾಗಿಯೇ ಗೆಲ್ಲಲು ಈ ಕಾರ್ಡ್ ಉಪಯೋಗಿಸಿರಿ. ಈ ಕಾರ್ಡ್ ಒಮ್ಮೆ ಮಾತ್ರವೇ ಉಪಯೋಗಿಸಬಹುದು.
- **ದೇವರ ಬೆಂಕಿ:** ನಿಮ್ಮ ಎದುರಾಳಿಯು ತನ್ನ ಸರದಿಯನ್ನು ತಪ್ಪಿಸುವಂತೆ ಮಾಡಿರಿ.
- **ಕುಷ್ಠರೋಗ:** ಸುತ್ತಿನಲ್ಲಿ ಸೋಲಿರಿ ಆದರೆ ನಿಮ್ಮ ಎದುರಾಳಿಗಳ ವೀರರ ಬಲವನ್ನು ಆಟದ ಉಳಿದ ಭಾಗಕ್ಕೆ ೨೦ ಅಂಕಗಳು ಕಡಿಮೆ ಮಾಡಿರಿ.

- **ವಶಪಡಿಸುವಿಕೆ:** ನಿಮ್ಮ ಸುತ್ತನ್ನು ಗೆಲ್ಲಲು ಈ ಕಾರ್ಡ್ ಉಪಯೋಗಿಸಿರಿ. ಹಾಗೆಯೇ ನಿಮ್ಮ ಎದುರಾಳಿಯಿಂದ ಮನಬಂದಂತೆ ವೀರನನ್ನು ತೆಗೆದುಕೊಳ್ಳಿರಿ, ಆಟದ ಉಳಿದ ಭಾಗಕ್ಕೆ ಅದನ್ನು ನಿಷ್ಕ್ರಿಯಗೊಳಿಸಿರಿ.

# ಮಾದರಿ ಸುತ್ತುಗಳು

ಈ ಉದಾಹರಣೆಯಲ್ಲಿ, ಮಗು ೧ ಮತ್ತು ಮಗು ೨ ವಿವಿಧ ವಾರಗಳಲ್ಲಿ ಭಾಗಿಯಾಗುವದರಿಂದ ಈ ಕಾರ್ಡ್ ಗಳನ್ನು ಹೊಂದಿರುತ್ತವೆ.

ಮಗು ೧





ಮಗು ೨

ಶಿಕ್ಷಕ

ಪ್ರಶ್ನೆ: “ಒಂದುವೇಳೆ ನಿಮ್ಮ ಸಹೋದರಿ ಸುಳ್ಳು ಹೇಳುವಂತೆ ಹೇಳುವದಾದರೆ, ಯಾವ ವೀರ ನಿಮಗೆ ಸಹಾಯ ಮಾಡುವನು?”

ಗುಣಲಕ್ಷಣ ಅವಶ್ಯವಾಗಿದೆ: ಯಥಾರ್ಥತೆ (ಮಕ್ಕಳಿಗೆ ಹೇಳಬೇಡಿರಿ)

ಮಕ್ಕಳು ಆಲೋಚಿಸುವಾಗ ಶಿಕ್ಷಕ ಕಾಯಬೇಕು ನಂತರ ೩೦ ತನಕ ಎಣಿಸಬೇಕು.

ಮಗು ೧

ಮಗು ೧ ಯಥಾರ್ಥತೆಯ ಗುಣವಾಗಿರಬಹುದು ಎಂಬ ಊಹೆಯೊಂದಿಗೆ ಇಸಾಕ ಮತ್ತು ಸತ್ಯವೇದವನ್ನು ಆಯ್ಕೆ ಮಾಡುತ್ತದೆ.

ಮಗು ೨

ಮಗು ೨ ನಂಬಿಕೆಯ ಗುಣವಾಗಿರಬಹುದು ಎಂಬ ಊಹೆಯೊಂದಿಗೆ ಅಬ್ರಹಾಮ ಮತ್ತು ಅಡಕವಾಗಿರುವ ಚಿನ್ನವನ್ನು ಆಯ್ಕೆ ಮಾಡುತ್ತದೆ.

ಗಮನಿಸಿರಿ: ಅವನು ಪಂಚಗ್ರಂಥ ಸತ್ಯವೇದ ಕಾರ್ಡ್ ಆರಿಸಿಕೊಳ್ಳಬೇಕು ಯಾಕಂದರೆ ಇಸಾಕನ ಕಥೆಯನ್ನು ಆದಿಕಾಂಡ ಪುಸ್ತಕದಲ್ಲಿ ನೋಡಬಹುದು

ನಂಬಿಕೆಯ ಅಂಕಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳಲು ಆಗುವದಿಲ್ಲ ಯಾಕಂದರೆ ಈ ಸುತ್ತಿನಲ್ಲಿ ಬೇಕಾಗಿರುವ ಗುಣಲಕ್ಷಣ ನಂಬಿಕೆಯಲ್ಲ ಯಥಾರ್ಥತೆಯಾಗಿದೆ.



ಮಗು ೧ ಈ ಸುತ್ತಿನಲ್ಲಿ ಗೆಲ್ಲುತ್ತದೆ!



ಇಸಾಕ: ೯೦ ಯಥಾರ್ಥತೆ

ಸತ್ಯವೇದ: +೨೦ ಅಂಕಗಳು

(-೧೦ ಅಂಕಗಳು)


ಅಬ್ರಹಾಮ: ೭೭ ಯಥಾರ್ಥತೆ

ಅಡಕವಾಗಿರುವ ಚಿನ್ನ: ಎದುರಾಳಿಗೆ -೧೦ ಅಂಕಗಳು


೧೦೦ ಯಥಾರ್ಥತೆ

೧೦೦ ಯಥಾರ್ಥತೆ






ಪ್ರತಿಯೊಬ್ಬ ಆಟಗಾರ ಮುಂದಿನ ಸುತ್ತಿಗೆ ತಯಾರಾಗುವ ಸಲುವಾಗ ತಾನೀಗ ತಾನೇ ಆಡಿರುವ ಕಾರ್ಡ್ ಅನ್ನು ಪಕ್ಕಕ್ಕಿಡಬೇಕು. ಒಂದು ಕಾರ್ಡ್ ಅನ್ನು ಒಂದು ಆಟಕ್ಕೆ ಒಮ್ಮೆ ಮಾತ್ರವೇ ಉಪಯೋಗಿಸಬೇಕು.






ಉಳಿದ ಕಾರ್ಡ್ ಗಳು ಮುಂದಿನ ಸುತ್ತಿಗೆ ಲಭ್ಯವಾಗುತ್ತವೆ.

ಮಗುವಿನ ಕಾರ್ಡ್ ಗಳ ಹಿಂದೆ ಅದರ ಹೆಸರು ಬರೆದರೆ, ಅವುಗಳನ್ನು ಯಾರೂ ತೆಗೆದುಕೊಳ್ಳುವದಿಲ್ಲ.

## ಸುತ್ತು ೨

ಪ್ರಶ್ನೆ: “ನಿಮ್ಮ ಸ್ನೇಹಿತರಲೊಬ್ಬರು ಬಂದು ನೀವು ಮಾಡುತ್ತಿರುವದು ತಪ್ಪು ಎಂದು ಹೇಳುತ್ತಾರೆ, ನೀವು ಮಾಡುತ್ತಿರುವದು ತಪ್ಪೆಂದು ನಿಮಗೆ ಗೊತ್ತಿದೆಯೇ, ನೀವು ಅದನ್ನು ಒಪ್ಪಿಕೊಳ್ಳಬೇಕು ಮತ್ತು ಕ್ಷಮಾಪಣೆ ಕೇಳಬೇಕು. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ?”

ಶಿಕ್ಷಕ



ಮಗು ೧



ಮಗು ೧ ಮೋಶೆ ಮತ್ತು ಸೃಷ್ಟಿಯನ್ನು ಆಯ್ಕೆ ಮಾಡಿಕೊಳ್ಳುತ್ತದೆ.

ಮಗು ೨ ಒಬ್ಬನೇ ಆಡಬಹುದಾದ, ಯೆಹೋವನ ಖಡ್ಗ ಕಾರ್ಡ್ ಆಯ್ಕೆ ಮಾಡಿಕೊಳ್ಳುತ್ತದೆ.

ಮಗು ೨







ಮೋಶೆ: ೧೦೦ ದೀನತೆ

ಸೃಷ್ಟಿ: ಒಂದುವೇಳೆ ಗೆಲ್ಲಬೇಕಾದರೆ, ಅವನು ತ್ಯಜಿಸಿರುವ ರಾಶಿಯಿಂದ ೩ ಕಾರ್ಡ್ ಗಳನ್ನು ಹಿಂದಕ್ಕೆ ಪಡೆಯಬೇಕು.

ಯೆಹೋವನ ಖಡ್ಗ ಎಲ್ಲಾ ಸುತ್ತುಗಳನ್ನು ಗೆಲ್ಲುತ್ತದೆ.

ಮಗು ೨ ಈ ಸುತ್ತನ್ನು ಗೆಲ್ಲುತ್ತದೆ!

**೧೦೦ ದೀನತೆ**

(ನಾನು ಗೆಲ್ಲುತ್ತೇನೆ ಎಂದು ಅವನು ಅಂದುಕೊಂಡಿರುತ್ತಾನೆ.)

## ಮುಕ್ತಾಯ

ಆಟಗಾರರಲ್ಲಿ ಒಬ್ಬನ ಬಳಿ ಇರುವ ಕಾರ್ಡ್ ಗಳೆಲ್ಲವೂ ಮುಗಿದು ಹೋದರೆ, ಆಟ ಮುಕ್ತಾಯವಾಗುತ್ತದೆ. ಹೆಚ್ಚು ಸುತ್ತುಗಳನ್ನು ಗೆದ್ದಿರುವ ಮಗು ಆಟವನ್ನು ಗೆಲ್ಲುತ್ತದೆ! ಮಕ್ಕಳ ಎದುರಾಳಿಗಳನ್ನು ಬದಲಾಯಿಸಿರಿ ಮತ್ತು ಪುನಃ ಆಡಿಸಿರಿ.

# ಆಟದ ಪ್ರಶ್ನೆಗಳು

೧. ಒಂದುವೇಳೆ ನಿಮ್ಮ ಸಹೋದರಿ ನಿಮಗೆ ಸುಳ್ಳು ಹೇಳುವಂತೆ ಹೇಳುವದಾದರೆ, ಯಾವ ವೀರ ನಿಮಗೆ ಸಹಾಯ ಮಾಡುವನು? (ಯಥಾರ್ಥತೆ)

೨. ನೀವು ಏನೋ ತಪ್ಪು ಮಾಡುತ್ತಿರುವಿರಿ ಎಂಬದಾಗಿ ನಿಮ್ಮ ಸ್ನೇಹಿತನು ನಿಮಗೆ ಹೇಳುವನು ಮತ್ತು ನೀವು ತಪ್ಪು ಮಾಡುತ್ತಿರುವದು ನಿಮಗೆ ಗೊತ್ತಾಗುತ್ತದೆ, ಅದನ್ನು ನೀವು ಒಪ್ಪಿಕೊಳ್ಳಬೇಕು ಹಾಗೂ ಕ್ಷಮಾಪಣೆ ಕೇಳಬೇಕು. ಯಾವ ವೀರ ನಿಮಗೆ ಸಹಾಯ ಮಾಡುವನು? (ದೀನತೆ)

೩. ಶಾಲೆಯಲ್ಲಿ ನಿಮ್ಮ ಜೊತೆಯಲ್ಲಿ ಓದುವವರು ನಿಮ್ಮನ್ನು ಗೇಲಿ ಮಾಡುತ್ತಿರಬಹುದು. ಯಾವ ವೀರ ನಿಮಗೆ ಸಹಾಯ ಮಾಡುವನು? (ಧೈರ್ಯ)

೪. ನಿಮ್ಮ ತಂದೆ ಕಾರ್ ತೊಳೆಯುವಂತೆ ಹೇಳಬಹುದು ಆದರೆ ನಿಮಗೆ ಇಷ್ಟವಿರುವದಿಲ್ಲ. ಯಾವ ವೀರ ನಿಮಗೆ ಸಹಾಯ ಮಾಡುವನು? (ವಿಧೇಯತೆ)

೫. ನೀವು ಅಂಗಡಿಗೆ ಹೋಗಿ ಕೆಲವು ತಿಂಡಿಗಳನ್ನು ತೆಗೆದುಕೊಳ್ಳುವಾಗ, ಅಂಗಡಿಯವನು ಹೆಚ್ಚಿನ ಹಣ ಹಿಂದಿರುಗಿಸುತ್ತಾನೆ? (ಯಥಾರ್ಥತೆ)

೬. ನಿಮ್ಮ ಶಾಲೆಯಲ್ಲಿ ನಿಮ್ಮೊಂದಿಗೆ ಓದುವವರು ಮಹಡಿಯ ಮೇಲಿಂದ ಬೀಳುವದಾದರೆ ಎಲ್ಲರೂ ಆಕೆಯನ್ನು ನೋಡಿ ಗೇಲಿ ಮಾಡುತ್ತಾರೆ. ಯಾವ ವೀರ ನಿಮಗೆ ಸಹಾಯ ಮಾಡುವನು? (ಒಳ್ಳೆಯ ಹೃದಯ)

೭. ಒಂದುದಿನ ಒಬ್ಬ ಹುಡುಗಿ ನಿಮಗೆ ಇಷ್ಟವಿಲ್ಲದಿರುವ ಉಡುಗೊರೆಯನ್ನು ಕೊಟ್ಟಿರುತ್ತಾಳೆ, ಅದನ್ನು ಆಕೆ ಬಹಳ ಪ್ರೀತಿಯಿಂದ ಕೊಟ್ಟಿರುತ್ತಾಳೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ದೀನತೆ)

೮. ನಿಮ್ಮ ಅಂಕಲ್ ನಿಮಗೆ ಒಂದು ಲೋಟ ಬೀರ್ ಕೊಡುತ್ತಾರೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ಧೈರ್ಯ)

೯. ನಿಮ್ಮ ಶಾಲೆಯಲ್ಲಿ ನಿಮ್ಮೊಂದಿಗೆ ಓದುವ ಹುಡುಗರು ನೀನಿಲ್ಲಿ ಕ್ರೈಸ್ತನಾಗಿರಲು ಸಾಧ್ಯವಿಲ್ಲ ಎಂದು ಹೇಳುತ್ತಾರೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ನಂಬಿಕೆ)

೧೦. ನಿಮ್ಮ ಅಕ್ಕ ನಿಮಗೆ ಬಹಳ ಇಷ್ಟವಾದ ಗೊಂಬೆಯನ್ನು ಒಡೆದುಹಾಕುತ್ತಾಳೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ಒಳ್ಳೇ ಹೃದಯ)

೧೧. ದೇವರು ನಿನ್ನನ್ನು ಪ್ರೀತಿಸುವದಿಲ್ಲ ಎಂದು ನಿಮ್ಮ ಅಪ್ಪ ಹೇಳುತ್ತಾರೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ನಂಬಿಕೆ)

೧೨. ನಿಮ್ಮ ಪ್ರಿಯ ಮಿತ್ರ ಒಳ್ಳೆಯವನಲ್ಲವೆಂದು ಅವನ ಜೊತೆಯಲ್ಲಿ ಆಟವಾಡಬಾರದೆಂದು ನಿಮ್ಮ ತಂದೆತಾಯಿಗಳು ಹೇಳುತ್ತಾರೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ವಿಧೇಯತೆ)

೧೩. ನಿಮ್ಮ ಸಭಾಪಾಲಕ ಅವರೊಂದಿಗೆ ಸುವಾರ್ತೆ ಸೇವೆಗೆ ಹೋಗಲು ಕರೆಯುತ್ತಾರೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ಧೈರ್ಯ)

೧೪. ಊಟದ ಸಮಯವಾಗಿರುತ್ತದೆ ಮತ್ತು ನಿಮ್ಮ ಅಮ್ಮ ನಿಮ್ಮ ಮನೆಯವರಿಗೆ ಬೇಕಾಗುವಷ್ಟು ಊಟವನ್ನು ಮಾತ್ರವೇ ಸಿದ್ಧಮಾಡಿರುತ್ತಾರೆ ಆದರೆ ನೆಂಟರು ಬಂದದ್ದರಿಂದ ನೀವು ಅವರಿಗೆ ಊಟ ಕೊಡಬೇಕಾಗುತ್ತದೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ನಂಬಿಕೆ)

೧೫. ನಿಮ್ಮ ಸಭಾಪಾಲಕ ಉಪವಾಸವಿರುವಂತೆ ಹೇಳುತ್ತಾರೆ ಆದರೆ ನಿಮ್ಮ ತಾಯಿ ನಿಮಗೆ ಇಷ್ಟವಾದ ಊಟವನ್ನು ನೀವು ಉಪವಾಸವಿರುವ ದಿನವೇ ಮಾಡಿರುತ್ತಾರೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ಧೈರ್ಯ)

೧೬. ನಿಮ್ಮ ಅಮ್ಮ ನಿಮಗೆ ಇಷ್ಟವಿಲ್ಲದ ಅಡುಗೆ ಮಾಡುತ್ತಾರೆ, ಆದರೆ ಆರೋಗ್ಯವಾಗಿರಲು ಅದನ್ನೇ ತಿನ್ನಬೇಕೆಂದು ಅಮ್ಮ ಹೇಳುತ್ತಾರೆ? (ವಿಧೇಯತೆ)

೧೭. ನಿಮ್ಮ ಅಮ್ಮ ಸ್ನಾನ ಮಾಡುವಂತೆ ಹೇಳುತ್ತಾರೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ವಿಧೇಯತೆ)

೧೮. ನಿಮ್ಮ ಶಾಲೆಯಲ್ಲಿ ಓದುವ ಹುಡುಗಿ ನಿಮ್ಮ ಬಟ್ಟೆಯ ಮೇಲೆ ಸಾಂಬಾರ್ ಚೆಲ್ಲುತ್ತಾಳೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ಒಳ್ಳೇ ಹೃದಯ)

೧೯. ನೀವು ರಸ್ತೆ ದಾಟುವಾಗ, ತರಕಾರಿಗಳನ್ನು ಕೈಯಲ್ಲಿ ಹಿಡಿದುಕೊಂಡಿರುವ ಸ್ತ್ರೀಯನ್ನು ನೋಡುವಿರಿ, ಕೈಯಲ್ಲಿರುವವುಗಳು ಇನ್ನೇನು ಬೀಳುವ ಸ್ಥಿತಿಯಲ್ಲಿರುತ್ತವೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ಒಳ್ಳೇ ಹೃದಯ)

೨೦. ನಿಮ್ಮ ಜೊತೆಯಲ್ಲಿ ಆಟವಾಡಲು ಬಾರದೆ ಯಾವಾಗಲೂ ನಿಮ್ಮೊಂದಿಗೆ ಜಗಳವಾಡುವ ಹುಡುಗನ ಮನೆಗೆ ಹೋಗಿ ತಿಂಡಿಯನ್ನು ಕೊಟ್ಟು ಬರುವಂತೆ ಅಮ್ಮ ಹೇಳುತ್ತಾರೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ಒಳ್ಳೇ ಹೃದಯ)

೧೧. ನಿಮ್ಮ ತರಗತಿಯಲ್ಲಿರುವ ಮಗು ನಿಮ್ಮ ಪುಸ್ತಕವನ್ನು ಹರಿದುಹಾಕುತ್ತದೆ ಮತ್ತು ನಿಮಗೆ ಸೇಡು ತೀರಿಸಿಕೊಳ್ಳಬೇಕೆನಿಸುತ್ತದೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ಧೈರ್ಯ)

೧೨. ನಿಮ್ಮ ಅಕ್ಕ ಯಾವಾಗಲೂ ನಿಮ್ಮ ಹತ್ತಿರ ಬಂದು ನೀನು ಚೆನ್ನಾಗಿಲ್ಲ ಎಂದು ಹೇಳುತ್ತಾಳೆ, ಆಗ ನಿಮಗೆ ಬಹಳ ದುಃಖವಾಗುತ್ತದೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ನಂಬಿಕೆ)

೧೩. ನಿಮ್ಮ ಸಂಡೇ ಸ್ಕೂಲ್ ಟೀಚರ್ ಯಾವಾಗಲೂ ನಿಮಗೆ ಬುದ್ಧಿ ಹೇಳುತ್ತಾರೆ, ಆಗ ನಿಮಗೆ ತುಂಬಾ ಕೋಪ ಬರುತ್ತದೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ವಿಧೇಯತೆ)

೧೪. ಒಂದುದಿನ ನಿಮ್ಮ ಜೊತೆಯಲ್ಲಿ ಓದುವ ನಿಮ್ಮ ಸ್ನೇಹಿತ ಮತ್ತೊಬ್ಬನ ಪುಸ್ತಕ ಕದಿಯುವಂತೆ ಹೇಳುತ್ತಾನೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ಯಥಾರ್ಥತೆ)

೧೫. ನೀವು ತಪ್ಪು ಮಾಡುವಾಗಲೆಲ್ಲಾ ನಿಮ್ಮ ಚಿಕ್ಕಮ್ಮ ನಿಮಗೆ ಶಿಕ್ಷೆ ಕೊಡುತ್ತಾರೆ, ಆದ್ದರಿಂದ ನಿಮಗೆ ಆಕೆ ಇಷ್ಟವಿಲ್ಲ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ದೀನತೆ)

೧೬. ಒಂದುದಿನ ನಿಮಗೆ ಮಾಡಲು ಇಷ್ಟವಿಲ್ಲದಿರುವ ಕೆಲಸವನ್ನು ಮಾಡುವಂತೆ ದೇವರು ನಿಮ್ಮನ್ನು ಕರೆಯುತ್ತಿದ್ದಾನೆ ಎಂಬದಾಗಿ ನಿಮಗೆ ಅನ್ನಿಸುತ್ತದೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ನಂಬಿಕೆ)

೧೭. ನಿಮ್ಮ ಜೊತೆಯಲ್ಲಿರುವವನು ಸಿಗರೇಟ್ ಸೇದುವಂತೆ ಹೇಳುತ್ತಾನೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ಯಥಾರ್ಥತೆ)

೧೮. ಸಭೆಯಲ್ಲಿರುವವರು ನೀನು ಸೋಮಾರಿ ಎಂದು ಹೇಳುತ್ತಾರೆ, ಆದರೆ ಅದನ್ನು ಒಪ್ಪಿಕೊಳ್ಳಲು ನಿನ್ನಿಂದ ಆಗುವದಿಲ್ಲ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ದೀನತೆ)

೧೯. ನಿನ್ನ ಅಪ್ಪಾಅಮ್ಮನ ಹತ್ತಿರ ಹಣ ಕಳ್ಳತನ ಮಾಡು ಎಂದು ಸ್ನೇಹಿತನು ಹೇಳುತ್ತಾನೆ, ಒಂದುವೇಳೆ ಮಾಡದಿದ್ದರೆ ನಾನು ನಿನ್ನ ಸ್ನೇಹಿತನಾಗಿರುವದಿಲ್ಲ ಎಂದು ಹೇಳುತ್ತಾನೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ಯಥಾರ್ಥತೆ)

೨೦. ನೀನು ದೇವರಿಂದ ಬಂದವನಲ್ಲ ಮಂಗನಿಂದ ಬಂದವನು ಎಂದು ನಿನ್ನ ಶಾಲಾ ಶಿಕ್ಷಕಿ ಹೇಳುತ್ತಾರೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ನಂಬಿಕೆ)

೨೧. ನಿನ್ನ ಶಿಕ್ಷಕಿ ಬೇಕೆಂದೇ ನಿನ್ನನ್ನು ವಿಫಲಗೊಳಿಸಿದ್ದಾರೆ, ನಿನ್ನ ತಂದೆತಾಯಿಗೆ ನಿನ್ನ ಮೇಲೆ ನಂಬಿಕೆಯಿಲ್ಲದೆ ಶಿಕ್ಷಿಸುತ್ತಾರೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ಧೈರ್ಯ)

೨೨. ನೀವು ನೋಡಲು ಚೆನ್ನಾಗಿಲ್ಲವೆಂದು ನಿಮ್ಮ ಸಂಗಾತಿ ಹೇಳುತ್ತಾರೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ದೀನತೆ)

೨೩. ನೀವೇನೋ ನೋವಾಗುವ ರೀತಿಯಲ್ಲಿ ನಿಮ್ಮ ಅಕ್ಕನೊಂದಿಗೆ ಮಾತನಾಡಿರುತ್ತೀರಿ, ಅದಕ್ಕೆ ಕ್ಷಮೆ ಕೇಳಬೇಕಾಗುತ್ತದೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ದೀನತೆ)

೨೪. ಆರಾಧನೆಯ ತಂಡದೊಂದಿಗೆ ಸೇರಿಕೊಳ್ಳಲು ನಿಮ್ಮ ಸಭಾಪಾಲಕ ನಿಮಗೆ ಅನುಮತಿಸುವದಿಲ್ಲ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ನಂಬಿಕೆ)

೨೫. ಶಾಲೆಯಲ್ಲಿ ನಿಮ್ಮ ಶಿಕ್ಷಕಿ ನಿಮ್ಮನ್ನು ಹೊಗಳುವುದೇ ಇಲ್ಲ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ಧೈರ್ಯ)

೨೬. ನೀವು ಮಾಡದಿರುವ ಕಾರ್ಯಕ್ಕೆ ನಿಮ್ಮ ಅಮ್ಮ ಬೈಯುತ್ತಾರೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ಒಳ್ಳೇ ಹೃದಯ)

೨೭. ಊರಿಂದ ಬಂದ ಅಜ್ಜಿ ನಿಮಗೇನೂ ತರದೆ ನಿಮ್ಮ ಒಡಹುಟ್ಟಿದವರಿಗೆ ಮಾತ್ರ ಉಡುಗೊರೆಗಳನ್ನು ತರುತ್ತಾರೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ಒಳ್ಳೇ ಹೃದಯ)

೨೮. ನೀವು ಬಸ್ ನಲ್ಲಿ ಪ್ರಯಾಣಿಸುವಾಗ ಒಬ್ಬ ಅಜ್ಜಿ ಬಸ್ ಹತ್ತುತ್ತಾರೆ, ನೀವು ಕುಳಿತುಕೊಂಡಿರುವಿರಿ ಆದರೆ ಆಕೆಗೆ ಆಸನ ಇರುವದಿಲ್ಲ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ಒಳ್ಳೇ ಹೃದಯ)

೨೯. ನೀವು ಶಾಲೆಯಲ್ಲಿ ಆಟವಾಡುವಾಗ ಕೆಳಗೆ ಬೀಳುವಿರಿ. ನಿಮ್ಮ ಜೊತೆಯಲ್ಲಿ ಓದುವವರೆಲ್ಲರೂ ನಿಮ್ಮನ್ನು ಗೇಲಿ ಮಾಡುತ್ತಾರೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ಧೈರ್ಯ)

೩೦. ಶಾಲೆಯಲ್ಲಿ ಎಲ್ಲರೂ ಆಟವಾಡುತ್ತಿರುತ್ತಾರೆ, ನೀವು ಸೇರಿಕೊಳ್ಳಲು ಹೋಗುವಾಗ, ಯಾರೂ ನಿಮ್ಮನ್ನು ಸೇರಿಸಿಕೊಳ್ಳುವದಿಲ್ಲ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ಧೈರ್ಯ)

೪೧. ಒಬ್ಬ ಹುಡುಗ ಒಬ್ಬ ಹುಡುಗಿಗೆ ಹೊಡೆಯುವದನ್ನು ನೀವು ನೋಡುತ್ತೀರಿ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ಒಳ್ಳೇ ಹೃದಯ)

೪೨. ಶಾಲೆಯಲ್ಲಿ ಎಲ್ಲರಿಗೂ ಬೇಕಾಗುವಷ್ಟು ಕತ್ತರಿ ಇರುವದಿಲ್ಲ, ನೀವು ಉಪಯೋಗಿಸುವದನ್ನು ನಿಮ್ಮ ಜೊತೆಯಲ್ಲಿ ಓದುವವರಲ್ಲಿ ಒಬ್ಬನು ತೆಗೆದುಕೊಳ್ಳುತ್ತಾರೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ದೀನತೆ)

೪೩. ಒಬ್ಬ ಹುಡುಗಿ ನಿಮ್ಮನ್ನು ಇಷ್ಟಪಡುತ್ತಾಳೆ, ಅವಳಿಗೆ ಮುತ್ತು ಕೊಡಬೇಕೆಂಬದು ನಿಮ್ಮ ಆಸೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ನಂಬಿಕೆ)

೪೪. ನೀವು ಸೈಕಲ್ ಗಾಗಿ ದೇವರನ್ನು ಬಹಳವಾಗಿ ಬೇಡಿಕೊಳ್ಳುತ್ತೀರ, ಆದರೂ ಸೈಕಲ್ ಸಿಕ್ಕಿಲ್ಲ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ನಂಬಿಕೆ)

೪೫. ನಿಮ್ಮ ತಾಯಿ ನಿಮ್ಮ ಅಂಗಡಿಗೆ ಕಳುಹಿಸುತ್ತಾರೆ. ೧೦೦ ರುಪಾಯಿ ಕೊಟ್ಟು ಕೆಲವು ವಸ್ತುಗಳನ್ನು ತರಲು ಹೇಳುತ್ತಾರೆ. ಆದರೆ ಉಳಿದ ಹಣ ಹಿಂಪಡೆಯಲು ಮರೆಯುತ್ತಾರೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ಯಥಾರ್ಥತೆ)

೪೬. ತರಗತಿಯಲ್ಲಿ ನಿಮ್ಮ ಶಿಕ್ಷಕ ಬುದ್ಧಿವಂತ ವಿದ್ಯಾರ್ಥಿ ಯಾರು ಎಂದು ಕೇಳುತ್ತಾರೆ. ನೀವೇ ಹೆಚ್ಚು ಬುದ್ಧಿವಂತರು, ಆದರೂ ನಿಮ್ಮ ಬಗ್ಗೆ ಹೆಚ್ಚಾಗಿ ಹೊಗಳಿಕೊಳ್ಳುವದು ಸರಿ ಅಲ್ಲ ಎಂದು ನಿಮಗೆ ಗೊತ್ತಿದೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ದೀನತೆ)

೪೭. ಒಂದುದಿನ ನೀವು ದಾರಿಯಲ್ಲಿ ಹೋಗುತ್ತಿರುವಾಗ ನಿಮ್ಮೆದುರಿನಲ್ಲಿ ಬರುತ್ತಿರುವ ವ್ಯಕ್ತಿಯ ಹಣದ ಚೀಲ ಆತನಿಗೆ ಗೊತ್ತಿಲ್ಲದೆ ಕೆಳಗೆ ಬೀಳುತ್ತದೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ಯಥಾರ್ಥತೆ)

೪೮. ನಿಮ್ಮ ಅಜ್ಜಿ ಅಂಗಡಿಗೆ ಹೋಗಿ ಊಟ ತರುವಂತೆ ಹೇಳುತ್ತಾರೆ, ಆದರೆ ತರಲು ಹೋದ ನೀವು ಆಕೆಗೆ ಬೇಕಾದದ್ದನ್ನು ತರಲಿಲ್ಲವಾದ್ದರಿಂದ ಆಕೆಗೆ ಕೋಪ ಬರುತ್ತದೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ವಿಧೇಯತೆ)

೪೯. ನಿಮ್ಮ ತಂದೆತಾಯಿ ನಿಮಗೆ ಇಷ್ಟವಿಲ್ಲದವರ ಜೊತೆ ನಿಮ್ಮನ್ನು ಬಿಟ್ಟು ಹೋಗುತ್ತಾರೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ಧೈರ್ಯ)

೫೦. ನಿಮ್ಮ ಅಕ್ಕ ನಿಮಗಿಂತ ವಯಸ್ಸಿನಲ್ಲಿ ತುಂಬಾ ದೊಡ್ಡವರು ಮತ್ತು ಯಾವಾಗಲೂ ನಿಮ್ಮ ವಿಷಯದಲ್ಲಿ ತಮಾಷೆ ಮಾಡುತ್ತಿರುತ್ತಾರೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ಒಳ್ಳೇ ಹೃದಯ)

೫೧. ನಿಮ್ಮ ಅಕ್ಕ ನಿಮ್ಮ ತಾಯಿಯ ಹಾಗೆ ಅಧಿಕಾರ ನಡೆಸುತ್ತಾರೆ ಮತ್ತು ನಿಮಗೆ ಆಕೆಯನ್ನು ಕಂಡರೆ ಇಷ್ಟವೇ ಇಲ್ಲ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ಧೈರ್ಯ)

೫೨. ದೇವರು ನಿನ್ನನ್ನು ಪ್ರೀತಿಸುತ್ತಾನೆ ಎಂಬದಾಗಿ ನಿಮ್ಮ ತಾಯಿ ಹೇಳುತ್ತಾರೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ನಂಬಿಕೆ)

೫೩. ಎಲ್ಲವೂ ಸಾಧ್ಯ ಎಂದು ನಂಬಬೇಕೆಂದು ನಿಮ್ಮ ತಂದೆತಾಯಿಗಳು ಹೇಳುತ್ತಾರೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ನಂಬಿಕೆ)

೫೪. ಸಭೆಯನ್ನು ಶುಚಿಮಾಡುವಂತೆ ನಿಮ್ಮ ಶಿಕ್ಷಕ ನಿಮಗೆ ಹೇಳುತ್ತಾರೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ದೀನತೆ)

೫೫. ನಿಮ್ಮ ತಂದೆತಾಯಿಗಳು ನಿಮ್ಮ ಕೋಣೆಯನ್ನು ಶುಚಿಗೊಳಿಸುವಂತೆ ಹೇಳುತ್ತಾರೆ, ಆದರೆ ನಿಮಗೆ ಇಷ್ಟವಿರುವದಿಲ್ಲ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ವಿಧೇಯತೆ)

೫೬. ನಿಮ್ಮ ಸ್ನೇಹಿತ ನಿಮ್ಮ ಬೈಕ್ ಕೇಳಲು ಬರುತ್ತಾನೆ, ಆದರೆ ನಿಮಗೆ ಕೊಡಲು ಇಷ್ಟವಿರುವದಿಲ್ಲ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ದೀನತೆ)

೫೭. ನೀವು ರಸ್ತೆ ದಾಟುವ ಅವಸರದಲ್ಲಿರುವಿರಿ ಆದರೆ, ಅದೇ ಸಮಯದಲ್ಲಿ ವ್ಹೀಲ್ ಚೇರ್ ನಲ್ಲಿ ಕುಳಿತಿರುವ ಸ್ತ್ರೀ ಸಹಾಯ ಮಾಡುವಂತೆ ಕೇಳುತ್ತಾರೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ಒಳ್ಳೇ ಹೃದಯ)

೫೮. ಪರೀಕ್ಷೆಯಲ್ಲಿ ಒಳ್ಳೇ ಅಂಕ ಪಡೆದಿದ್ದೀರೆಂದು ನಿಮ್ಮ ತಂದೆತಾಯಿ ನಿಮಗೆ ಬಹುಮಾನ ಕೊಡಲು ಬಯಸುತ್ತಾರೆ, ಆದರೆ ಮೋಸ ಮಾಡಿ ಒಳ್ಳೇ ಅಂಕಪಡೆದಿರುವದು ನಿಮಗೆ ಮಾತ್ರ ಗೊತ್ತಿರುತ್ತದೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ಯಥಾರ್ಥತೆ)

೫೯. ತರಗತಿಯ ಪ್ರಾಜೆಕ್ಟ್ ಗಾಗಿ ನಿಮ್ಮ ಶಿಕ್ಷಕಿ ನಿಮ್ಮನ್ನು ಒಂದು ಗುಂಪಿನೊಳಗೆ ಹಾಕಿರುತ್ತಾರೆ. ಆದರೆ ನಿಮ್ಮ ಗುಂಪಿನಲ್ಲಿರುವ ಒಬ್ಬ ಸಹೋದರ ನಿಮಗೆ ತೊಂದರೆ ಕೊಡುತ್ತಿರುತ್ತಾನೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ಧೈರ್ಯ)

೬೦. ಉದ್ಯೋಗಕ್ಕಾಗಿ ಪ್ರಾರ್ಥನೆ ಮಾಡುವಂತೆ ನಿಮ್ಮ ತಂದೆ ಹೇಳುತ್ತಾರೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ನಂಬಿಕೆ)

೬೧. ನಿಮಗಿಷ್ಟವಿಲ್ಲದಿರುವ ಕೆಲಸ ಮಾಡುವಂತೆ ನಿಮ್ಮ ತಂದೆ ನಿಮಗೆ ಹೇಳುತ್ತಾರೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ವಿಧೇಯತೆ)

೬೨. ಸತ್ಯವೇದದಲ್ಲಿ ಬರೆದಿರುವದೆಲ್ಲಾ ಸುಳ್ಳು ಎಂದು ನಿಮ್ಮ ಶಾಲಾ ಶಿಕ್ಷಕಿ ಹೇಳುತ್ತಾರೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ನಂಬಿಕೆ)

೬೩. ನಿಮ್ಮ ತಂದೆತಾಯಿಗಳು ಕಳುಹಿಸಲಿಲ್ಲವೆಂದರೂ ನೀವು ಸಭೆಯ ಕಾರ್ಯಕ್ಕೆ ಹೋಗಬಹುದೆಂದು ನಿಮ್ಮ ಸಭಾಪಾಲಕ ಹೇಳುತ್ತಾರೆ, ಆದರೆ ದೇವರು ತಂದೆತಾಯಿಗಳನ್ನು ನಿಮ್ಮ ಮೇಲೆ ಮೊದಲ ಅಧಿಕಾರಿಗಳನ್ನಾಗಿ ನೇಮಿಸಿದ್ದಾನೆ ಎಂಬದು ನಿಮಗೆ ಗೊತ್ತಿದೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ಧೈರ್ಯ)

೬೪. ನಿಮ್ಮ ತಂದೆತಾಯಿಗಳು ನಿಮ್ಮನ್ನು ಸಭೆಯಲ್ಲಿ ನಡೆಯುವ ಕಾರ್ಯಗಳಿಗೆ ಕಳುಹಿಸುವದಿಲ್ಲ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ವಿಧೇಯತೆ)

೬೫. ನಿಮ್ಮ ತಂದೆತಾಯಿಗಳು ನೀವು ಮನೆಯಿಂದ ಹೊರಗೆ ಹೋಗಬಾರದೆಂದು ಹೇಳುತ್ತಾರೆ, ಮನೆಯಲ್ಲಿ ನೀವು ಒಬ್ಬರೇ ಇರಬೇಕಾಗುತ್ತದೆ, ಆದರೆ ನಿಮ್ಮ ಸ್ನೇಹಿತರು ಬಂದು ಆಟವಾಡಲು ಹೋಗೋಣ ಎಂದು ಹೇಳುತ್ತಾರೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ವಿಧೇಯತೆ)

೬೬. ನೀವು ಅಂಗಡಿಗೆ ಹೋಗುವಾಗ ಒಬ್ಬ ಹುಡುಗ ನಿಮ್ಮೊಂದಿಗೆ ಕೆಟ್ಟದಾಗಿ ಮಾತನಾಡುತ್ತಾನೆ, ತಿರುಗಿ ಮಾತನಾಡಬಾರದೆಂದು ನಿಮಗೆ ಗೊತ್ತಿರುತ್ತದೆ ಆದರೂ ಬಹಳ ಕೋಪ ಬಂದಿರುತ್ತದೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ಧೈರ್ಯ)

೬೭. ಅತ್ಯಂತ ಪ್ರಾಮುಖ್ಯವಾದ ಪರೀಕ್ಷೆ ಎದುರಾಗುತ್ತದೆ ಆದರೆ ನೀವು ಓದುವದಿಲ್ಲ ಮತ್ತು ಪರೀಕ್ಷೆ ಬರೆಯುವಾಗ ಕಾಪಿ ಹೊಡೆಯುವ ಅವಕಾಶ ಸುಲಭವಾಗಿ ಸಿಗುತ್ತದೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ಯಥಾರ್ಥತೆ)

೬೮. ತರಗತಿಯಲ್ಲಿರುವವರೆಗೂ ಸೇರಿ ಅಸೈನ್ಮೆಂಟ್ ಮಾಡಬೇಕಾಗಿರುತ್ತದೆ ಆದರೆ ನೀವೊಬ್ಬರೇ ಅಸೈನ್ಮೆಂಟ್ ಮಾಡುತ್ತೀರಿ ಮತ್ತು ಅಸೈನ್ಮೆಂಟ್ ಮಾಡಲು ಸಹಾಯ ಮಾಡುವಂತೆ ಇತರರಿಗೆ ಹೇಳಬೇಕಾಗುತ್ತದೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ಧೈರ್ಯ)

೬೯. ತರಗತಿಯಲ್ಲಿ ಒಬ್ಬ ಹುಡುಗ ನಿಮ್ಮನ್ನು ಸುಳ್ಳುಗಾರ ಎಂದು ಕರೆಯುತ್ತಾನೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ಧೈರ್ಯ)

೭೦. ತರಗತಿಯಲ್ಲಿ ಯಾವುದೋ ವಸ್ತು ಕಳೆದುಹೋಗುವಾಗ ತರಗತಿಯಲ್ಲಿ ಇರುವವರೆಲ್ಲರೂ ನಿಮ್ಮನ್ನು ಸಂದೇಹದಿಂದ ನೋಡುತ್ತಾರೆ ಮತ್ತು ಕೆಲವರು ನಿಮ್ಮನ್ನು ಕಳ್ಳ ಎಂದು ಕರೆಯುತ್ತಾರೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ನಂಬಿಕೆ)

೭೧. ನಿಮ್ಮ ತಾಯಿ ಮಗನೇ ನೀನು ಮಾಡಿರುವದು ತಪ್ಪು, ಅದನ್ನು ಒಪ್ಪಿಕೊಳ್ಳಬೇಕು ಮತ್ತು ನಿನ್ನ ತಪ್ಪನ್ನು ತಿದ್ದುಕೊಳ್ಳಬೇಕು ಎಂದು ಹೇಳುತ್ತಾರೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ದೀನತೆ)

೭೨. ನಿಮ್ಮ ತಾಯಿ ಮಗನೇ ನಾನು ನಿನ್ನನ್ನು ಬಹಳವಾಗಿ ಪ್ರೀತಿಸುತ್ತೇನೆ, ನೀನೂ ನನ್ನನ್ನು ಪ್ರೀತಿಸಬೇಕು ಎಂದು ಹೇಳುತ್ತಾರೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ಒಳ್ಳೇ ಹೃದಯ)

೭೩. ನಿಷಿದ್ಧವಾಗಿರುವ ಪದಾರ್ಥವನ್ನು ತಿನ್ನುವಂತೆ ನಿಮ್ಮ ಸ್ನೇಹಿತ ನಿಮಗೆ ಹೇಳುತ್ತಾನೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ಧೈರ್ಯ)

೭೪. ನಿಮ್ಮ ಕುಟುಂಬದವರು ಮನೆ ಖರೀದಿಸಲು ಎದುರುನೋಡುತ್ತಿರುವಾಗ ನೀವು ನಿಮ್ಮ ಅಜ್ಜಿಯ ಮನೆಯಲ್ಲಿ ಇರಬೇಕಾಗುತ್ತದೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ನಂಬಿಕೆ)

೭೫. ನಿಮ್ಮ ತಂದೆತಾಯಿ ಏನೋ ತರಲು ಅಂಗಡಿಗೆ ಹೋಗು ಎಂದು ಹೇಳುತ್ತಾರೆ ಆದರೆ ಹೊರಗೆ ತುಂಬಾ ಬಿಸಿಲಿರುತ್ತದೆ ಹಾಗೂ ಅಂಗಡಿ ತುಂಬಾ ದೂರ ಇರುತ್ತದೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ದೀನತೆ)

೭೬. ನಿಮ್ಮ ಅಣ್ಣ ಅಪ್ಪನ ಹಣ ಕದ್ದಿದ್ದಾನೆ ಎಂದು ನಿಮಗೆ ಗೊತ್ತಾಗುತ್ತದೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ಯಥಾರ್ಥತೆ)

೭೭. ನಿಮ್ಮ ಅಪ್ಪ ಕಸ ಹೊರಗೆ ಬಿಸಾಡುವಂತೆ ಹೇಳುತ್ತಾರೆ, ಆದರೆ ಹೊರಗೆ ಬಹಳ ಕತ್ತಲೆ ಇರುತ್ತದೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ವಿಧೇಯತೆ)

೭೮. ನೀವು ನಿಮ್ಮ ಸ್ನೇಹಿತರ ಜೊತೆ ಹೊರಗೆ ಹೋಗಿರುವಾಗ ಅಂಗಡಿಯಲ್ಲಿ ಕಳ್ಳತನ ಮಾಡುವಂತೆ ಅವರು ಹೇಳುತ್ತಾರೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ಯಥಾರ್ಥತೆ)

೭೯. ನಿಮ್ಮ ಶಾಲಾ ಶಿಕ್ಷಕಿ ದೇವರೇ ಇಲ್ಲ ಎಂದು ಹೇಳುತ್ತಾರೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ನಂಬಿಕೆ)

೮೦. ನಿಮ್ಮ ಒಳ್ಳೆಯ ಅಂಕಗಳ ನಿಮಿತ್ತ ಸ್ಕಾಲರ್ ಷಿಪ್ ದೊರೆಯಲಿ ಎಂದು ನೀವು ಪ್ರಾರ್ಥನೆ ಮಾಡುತ್ತಿದ್ದೀರಿ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ನಂಬಿಕೆ)

೮೧. ಪಕ್ಕದ ಮನೆಯವರ ಗಿಡಗಳಿಂದ ಹಣ್ಣುಗಳನ್ನು ಕದಿಯುವಂತೆ ನಿಮ್ಮ ಸ್ನೇಹಿತರು ಹೇಳುತ್ತಾರೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ಯಥಾರ್ಥತೆ)

೮೨. ಪಕ್ಕದ ಮನೆಯವರ ಬಾಗಿಲನ್ನು ಬಡಿದು ಹೋಗುವಂತೆ ಸ್ನೇಹಿತರು ಹೇಳುತ್ತಾರೆ ಆದರೆ ಹಾಗೆ ಮಾಡಬಾರದೆಂದು ನಿಮ್ಮ ತಂದೆತಾಯಿ ಹೇಳಿದ್ದಾರೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ವಿಧೇಯತೆ)

೮೩. ನಿಮ್ಮ ಶಿಕ್ಷಕಿ ಯಾವುದೋ ಒಂದು ಪುಸ್ತಕವನ್ನು ಓದುವಂತೆ ಹೇಳುತ್ತಾರೆ ಆದರೆ ನೀವು ಬೇರೆ ಯಾವುದೋ ಪುಸ್ತಕ ಓದುತ್ತೀರಿ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ವಿಧೇಯತೆ)

೮೪. ನಿಮ್ಮ ತಾಯಿ ತಲೆನೋವಿನಿಂದ ಬಿಡುಗಡೆ ದೊರೆಯುವಂತೆ ಪ್ರಾರ್ಥನೆ ಮಾಡು ಎಂದು ಹೇಳುತ್ತಾರೆ ಮತ್ತು ನಿಮ್ಮ ಪ್ರಾರ್ಥನೆ ಕೇಳಿ ದೇವರು ಬಿಡುಗಡೆ ಕೊಡುತ್ತಾನೆ ಎಂದು ಹೇಳುತ್ತಾರೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ನಂಬಿಕೆ)

೮೫. ನಿಮ್ಮ ತರಗತಿಯಲ್ಲಿರುವ ಹುಡುಗನೊಬ್ಬನ ಬಳಿ ತಿನ್ನಲು ಊಟ ಮತ್ತು ಊಟ ಕೊಳ್ಳಲು ಹಣ ಇಲ್ಲದಿರುವದರಿಂದ ಯಾವಾಗಲೂ ಬೇಸರವಾಗಿರುತ್ತಾನೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ಒಳ್ಳೇ ಹೃದಯ)

೮೬. ಸಭೆಗೆ ಬರುವ ಮಕ್ಕಳಿಗೆ ಸತ್ಯವೇದ ಪಾಠ ಹೇಳಿಕೊಡುವಂತೆ ಸಭಾಪಾಲಕರು ನಿಮಗೆ ಹೇಳುತ್ತಾರೆ, ಆದರೆ ಮಕ್ಕಳು ನಿಮ್ಮ ಮಾತು ಕೇಳುತ್ತಾರೋ ಇಲ್ಲವೋ ಎಂಬ ದೃಢತೆ ನಿಮಗೆ ಇರುವದಿಲ್ಲ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ನಂಬಿಕೆ)

೮೭. ಅನಾಥ ಮಕ್ಕಳು ಹೇಗೆ ಬದುಕುತ್ತಾರೆ ಎಂಬದನ್ನು ತೋರಿಸಲು ಶಾಲೆಯಿಂದ ನಿಮ್ಮನ್ನು ಅನಾಥಾಶ್ರಮಕ್ಕೆ ಕರೆದುಕೊಂಡು ಹೋಗುತ್ತಾರೆ ಮತ್ತು ಅಲ್ಲಿನ ಮಕ್ಕಳಿಗೆ ಸಹಾಯ ಮಾಡುವಂತೆ ನಿಮ್ಮ ಶಿಕ್ಷಕರು ಹೇಳುತ್ತಾರೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ಒಳ್ಳೇ ಹೃದಯ)

೮೮. ನಿಮ್ಮ ಗ್ರಾಜುವೇಷನ್ ಸಮಯದಲ್ಲಿ ಕಪ್ಪು ಪ್ಯಾಂಟ್ ಧರಿಸ ಬೇಕಾಗುತ್ತದೆ, ಆದರೆ ಹೊಸ ಪ್ಯಾಂಟ್ ತೆಗೆದುಕೊಡುವಷ್ಟು ಸೌಕರ್ಯ ನಿಮ್ಮ ತಂದೆತಾಯಿಗಳಿಗೆ ಇರುವದಿಲ್ಲ ಆದ್ದರಿಂದ ನೀವು ನಿಮ್ಮ ಸಂಬಂಧಿಕರ ಹಳೇ ಪ್ಯಾಂಟ್ ಪಡೆಯಬೇಕಾಗುತ್ತದೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ದೀನತೆ)

೮೯. ನಿಮ್ಮ ಜೊತೆಯಲ್ಲಿ ಓದುವವರಲ್ಲೊಬ್ಬನು, ನೀವು ಯಾವ ಸಹಾಯ ಮಾಡದಿದ್ದರೂ ನಿಮ್ಮ ಹೆಸರನ್ನು ಒಂದು ಪ್ರಾಜೆಕ್ಟ್ ನಲ್ಲಿ ಸೇರಿಸಲು ಬಯಸುತ್ತಾರೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ಯಥಾರ್ಥತೆ)

೯೦. ಸಭೆಯಲ್ಲಿ ನಡೆಯುವ ಕಾರ್ಯಗಳಿಗೆ ಸಹಾಯ ಮಾಡಲು ನೀವು ಹೋಗುತ್ತೀರಿ ಆದರೆ ಅಲ್ಲಿರುವವರು ನಿಮಗೆ ಯಾವ ಕಾರ್ಯಗಳನ್ನು ಮಾಡಲು ಬಿಡುವದಿಲ್ಲ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ಧೈರ್ಯ)

೯೧. ನಿಮ್ಮ ಜೊತೆ ಓದುವ ಹುಡುಗ ನೀವು ತೆಗೆದುಕೊಂಡು ಹೋಗಿರುವ ತಿಂಡಿ ಕೇಳುತ್ತಾನೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ಒಳ್ಳೇ ಹೃದಯ)

೯೨. ಒಂದುದಿನ ನೀವು ನಿಮ್ಮ ಸ್ನೇಹಿತನ ಬಳಿ ಕುಡಿಯಲು ನೀರು ಕೇಳುತ್ತೀರಿ, ಆದರೆ ಅವನು ಕೊಡುವದಿಲ್ಲ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ದೀನತೆ)

೯೩. ಸ್ನಾನ ಮಾಡದೆ, ಕೊಳಗಾಗಿರುವ ನಿಮ್ಮ ತರಗತಿಯ ಹುಡುಗನೊಬ್ಬ ನೀವಿರುವ ಗುಂಪಿಗೆ ಸೇರಲು ಬರುತ್ತಾನೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ಒಳ್ಳೇ ಹೃದಯ)

೯೪. ಒಂದುದಿನ ಒಬ್ಬ ದಾರಿಹೋಕ ನಿಮಗೆ ಮಾದಕ ಪದಾರ್ಥಗಳನ್ನು ಕೊಡುತ್ತಾನೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ಧೈರ್ಯ)

೯೫. ನಿಮ್ಮ ತರಗತಿಯಲ್ಲಿರುವ ಹುಡುಗಿಯೊಬ್ಬನು ಗೊತ್ತಿಲ್ಲದೆ ತನ್ನ ಮೇಜಿನ ಮೇಲೆ ಹಣವನ್ನು ಬಿಟ್ಟು ಹೋಗುತ್ತಾಳೆ, ಆದರೆ ಅದು ನಿಮಗೆ ಮಾತ್ರ ಗೊತ್ತಾಗುತ್ತದೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ಯಥಾರ್ಥತೆ)

೯೬. ನಿಮ್ಮ ಶಿಕ್ಷಕಿ ತರಗತಿಯಲ್ಲಿ ತಪ್ಪಾದ ವಿಷಯ ಕಲಿಸುತ್ತಿರುತ್ತಾರೆ, ಆಕೆ ಹೇಳುವದೆಲ್ಲಾ ತಪ್ಪಾಗಿರುತ್ತದೆ, ಎಲ್ಲರೂ ಆಕೆಯನ್ನು ಗೇಲಿ ಮಾಡುತ್ತಿರುತ್ತಾರೆ ಆದರೆ ನಿಮಗೇನು ಮಾಡಬೇಕೆಂದು ಗೊತ್ತಿರುವದಿಲ್ಲ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ಯಥಾರ್ಥತೆ)

೯೭. ನಿಮಗೆ ಹುಡುಗಿಯರ ಸಹವಾಸ ಇಷ್ಟವಿರುವದಿಲ್ಲ, ಆದ್ದರಿಂದ ಜೊತೆಯಲ್ಲಿರುವವರೆಲ್ಲರೂ ನಿಮ್ಮನ್ನು ಪುಲ್ಲಕ ಎಂದು ಕರೆಯುತ್ತಾರೆ, ನೀವಾದರೋ ದೇವರು ತೋರಿಸುವ ಸಮಯಕ್ಕಾಗಿ ಕಾಯುತ್ತಿರುತ್ತೀರ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ನಂಬಿಕೆ)

೯೮. ನಿಮ್ಮ ತರಗತಿಯಲ್ಲಿರುವವರೆಲ್ಲ ಬೇರೆಯವರು ಬರೆದಿರುವದನ್ನು ನೋಡಿಕೊಂಡು ಬರೆಯುತ್ತಾರೆ ಆದರೆ ನೀವು ಬರೆಯಬೇಕಾಗಿರುವದನ್ನು ಬರೆದಿರುವದಿಲ್ಲ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ಯಥಾರ್ಥತೆ)

೯೯. ನಿಮ್ಮ ಪಕ್ಕದ ಮನೆಯಲ್ಲಿರುವ ಹುಡುಗರು ಅಸಭ್ಯವಾಗಿ ನಡೆದುಕೊಳ್ಳುತ್ತಾರೆ ಆದ್ದರಿಂದ ಅವರ ಜೊತೆ ಆಡಬಾರದೆಂದು ನಿಮ್ಮ ತಂದೆ ಹೇಳಿದ್ದಾರೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ವಿಧೇಯತೆ)

೧೦೦. ಯಾವಾಗಲೂ ತುಂಟತನ ಮಾಡುತ್ತಾ ತನ್ನ ಜೊತೆಯವರೊಂದಿಗೆ ಜಗಳವಾಡುವ ಹುಡುಗ, ನಿಮ್ಮ ಸ್ನೇಹಿತನಾಗಲು ಬರುತ್ತಾನೆ ಮತ್ತು ಏಕಾಂತವಾಗಿರುವ ತನಗೆ ಸಹಾಯ ಮಾಡುವಂತೆ ಕೇಳುತ್ತಾನೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ಒಳ್ಳೇ ಹೃದಯ)

೧೦೧. ನೀವು ನಿಮ್ಮ ತರಗತಿಯಲ್ಲಿರುವವರೊಂದಿಗೆ ಜಗಳವಾಡುವದಿಲ್ಲವಾದ್ದರಿಂದ ಹುಡುಗರು ನಿಮ್ಮನ್ನು ಹೇಡಿ ಎಂದು ಕರೆಯುತ್ತಾರೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ಧೈರ್ಯ)

೧೦೨. ದೇವರು ನಿನ್ನನ್ನು ಎಂದಿಗೂ ಉಪಯೋಗ ಮಾಡುವದಿಲ್ಲ ಎಂದು ನಿಮ್ಮ ಸಭೆಯ ನಾಯಕರಲ್ಲಿ ಒಬ್ಬರು ನಿಮಗೆ ಹೇಳುತ್ತಾರೆ, ಹೌದು ದೇವರು ನನ್ನನ್ನು ಕರೆದಿಲ್ಲವೇನೋ ಎಂದು ನಿಮಗೆ ಬೇಸರವಾಗುತ್ತದೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ನಂಬಿಕೆ)

೧೦೩. ನಿಮ್ಮ ಶಿಕ್ಷಕಿ ತನ್ನ ಬಾಯಲ್ಲಿರುವ ತಿಂಡಿಯನ್ನು ತೆಗೆದು ನಿಮಗೆ ತಿನ್ನಲು ಕೊಡುತ್ತಾರೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ಧೈರ್ಯ) (ಹಹಹ್ಹಾ)

೧೦೪. ವಾರಕ್ಕೊಮ್ಮೆ ಸಭೆಯನ್ನು ಪೂರ್ತಿಯಾಗಿ ಗೂಡಿಸಬೇಕೆಂದು ನಿಮ್ಮ ಸಭಾಪಾಲಕ ಹೇಳುತ್ತಾರೆ, ಆದರೆ ಅದು ನಿಮಗೆ ಸ್ವಲ್ಪವೂ ಇಷ್ಟವಿಲ್ಲ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ವಿಧೇಯತೆ)

೧೦೫. ನಿಮ್ಮ ಸಂಡೇ ಸ್ಕೂಲ್ ಟೀಚರ್ ಎಲ್ಲರಿಗೂ ಚಾಕೊಲೇಟ್ ಹಂಚುತ್ತಾರೆ, ಆದರೆ ಒಬ್ಬ ಹುಡುಗನಿಗೆ ಮಾತ್ರ ಚಾಕೊಲೇಟ್ ಸಿಗುವದಿಲ್ಲ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ಒಳ್ಳೇ ಹೃದಯ)

೧೦೬. ನಿಮ್ಮ ಅಪ್ಪ ನಿಮ್ಮನ್ನು ಪ್ರೀತಿಸುವದಿಲ್ಲ ಎಂದು ಅಮ್ಮ ಹೇಳುತ್ತಾರೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ನಂಬಿಕೆ)

೧೦೭. ಪೇಂಟ್ ಗ್ರಾಫಿಟಿಗೆ ಬರುವಂತೆ ನಿಮ್ಮ ಸ್ನೇಹಿತರು ಹೇಳುತ್ತಾರೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ಯಥಾರ್ಥತೆ)

೧೦೮. ನಿಮ್ಮ ಸ್ನೇಹಿತರು ಎಲ್ಲರೂ ಸೇರಿ ಗೋಡೆ ಹಾರೋಣ ಎಂದು ಹೇಳುತ್ತಾರೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ಯಥಾರ್ಥತೆ)

೧೦೯. ನಿಮ್ಮ ಸಂಡೇ ಸ್ಕೂಲ್ ಶಿಕ್ಷಕಿ ನಿಮಗೆ ನೀವು ತುಂಬಾ ಒಳ್ಳೇ ಹುಡುಗ ಆದರೂ ನಡವಳಿಕೆಗಳನ್ನು ಬದಲಾಯಿಸಿಕೊಳ್ಳಬೇಕು ಎಂದು ಹೇಳುತ್ತಾರೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ದೀನತೆ)

೧೧೦. ಪಕ್ಕದ ಮನೆಯವರಿಗೆ ತೊಂದರೆ ಕೊಡಲು ನಿಮ್ಮ ಸ್ನೇಹಿತ ನಿಮ್ಮನ್ನು ಕರೆಯುತ್ತಾನೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ಯಥಾರ್ಥತೆ)

೧೧೧. ನಿಮ್ಮ ಪ್ರಿಯ ಗೆಳೆಯನೇ ನಿಮ್ಮ ಹಣ ಕದ್ದುಕೊಂಡಿದ್ದಾನೆ ಎಂಬದು ನಿಮಗೆ ಗೊತ್ತಾಗುತ್ತದೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ಧೈರ್ಯ)

೧೧೨. ಅನಾರೋಗ್ಯದಲ್ಲಿರುವವರಿಗಾಗಿ ಪ್ರಾರ್ಥನೆ ಮಾಡಲು ಆಸ್ಪತ್ರೆಗೆ ಹೋಗೋಣ ಎಂದು ನಿಮ್ಮ ಸಭಾಪಾಲಕ ನಿಮ್ಮನ್ನು ಕರೆಯುತ್ತಾರೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ನಂಬಿಕೆ)

೧೧೩. ನಿಮ್ಮನ್ನು ಇಷ್ಟಪಡದ ಹಾಗೂ ಯಾವಾಗಲೂ ನಿಮ್ಮನ್ನು ಬೈಯುವ ನಿಮ್ಮ ಚಿಕ್ಕಮ್ಮನ ಮನೆಗೆ ಹೋಗುವಂತೆ ನಿಮ್ಮ ಅಮ್ಮ ಹೇಳುತ್ತಾರೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ವಿಧೇಯತೆ)

೧೧೪. ನಿಮ್ಮ ಅಮ್ಮ ನನ್ನ ಮನಸ್ಸು ಸರಿಯಾಗಿಲ್ಲ ದಯವಿಟ್ಟು ನನಗಾಗಿ ಪ್ರಾರ್ಥನೆ ಮಾಡು ಎಂದು ಹೇಳುತ್ತಾರೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ನಂಬಿಕೆ)

೧೧೫. ನಿಮ್ಮ ಅಮ್ಮ ನಿಮಗಿಂತ ನಿಮ್ಮ ಅಣ್ಣನಿಗೆ ಹೆಚ್ಚಾಗಿ ಊಟ ಬಡಿಸುತ್ತಾರೆ ಮತ್ತು ಆತನು ಹೆಚ್ಚಾಗಿ ತಿನ್ನುತ್ತಾನೆ ಎಂದು ಕಾರಣ ಕೊಡುತ್ತಾರೆ, ಅದನ್ನು ನೀವು ಒಪ್ಪಿಕೊಳ್ಳಬೇಕಾಗುತ್ತದೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ದೀನತೆ)

೧೧೬. ಪರೀಕ್ಷೆಯಲ್ಲಿ ಕಾಪಿ ಹೊಡೆಯಲು ಸಹಾಯ ಮಾಡುವಂತೆ ನಿಮ್ಮ ಸ್ನೇಹಿತ ನಿಮ್ಮನ್ನು ಕೇಳಿಕೊಳ್ಳುತ್ತಾನೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ಯಥಾರ್ಥತೆ)

೧೧೭. ನಿಮ್ಮ ಆಟದ ವಸ್ತುಗಳು ಹಳೆಯದಾಗಿರುತ್ತವೆ, ಆದರೆ ಹೊಸದನ್ನು ಖರೀದಿಸಲು ನಿಮ್ಮ ತಂದೆತಾಯಿಯ ಬಳಿ ಹಣ ಇರುವದಿಲ್ಲ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ದೀನತೆ)

೧೧೮. ನಿಮ್ಮ ಸ್ನೇಹಿತರು ಫುಟ್ ಬಾಲ್ ಆಡುವಾಗ ನಿಮ್ಮನ್ನು ಸೇರಿಸಿಕೊಳ್ಳುವದಿಲ್ಲ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ಧೈರ್ಯ)

೧೧೯. ಪರೀಕ್ಷೆಯಲ್ಲಿ ಪಾಸಾಗಬೇಕಾದರೆ ಶಿಕ್ಷಕಿಯ ಮೇಜಿನಲ್ಲಿರುವ ಉತ್ತರ ಪತ್ರಿಕೆಗಳನ್ನು ಕದಿಯಬೇಕೆಂದು ನಿಮ್ಮ ಸ್ನೇಹಿತ ಹೇಳುತ್ತಾನೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ಯಥಾರ್ಥತೆ)

೧೧೦. ಕೆಲವರು ನಾಯಿಮರಿಯನ್ನು ಹೊಡೆಯುತ್ತಿರುತ್ತಾರೆ, ನೀವೂ ಅಲ್ಲೇ ಇರುತ್ತೀರಿ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ಒಳ್ಳೇ ಹೃದಯ)

೧೧೧. ಯಾರೋ ಮೇಜಿನ ಮೇಲೆ ಸಾವಿರ ರುಪಾಯಿ ಇಟ್ಟೆ ಹೋಗಿದ್ದಾರೆ, ಅದನ್ನು ಯಾರೂ ನೋಡಿಲ್ಲ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ಯಥಾರ್ಥತೆ)

೧೧೨. ನಿಮ್ಮಿಷ್ಟದ ಕಾರ್ಯಕ್ರಮ ಇನ್ನೇನು ಟಿವಿಯಲ್ಲಿ ಪ್ರಾರಂಭವಾಗುತ್ತದೆ ಅಷ್ಟರಲ್ಲಿ ನಿಮ್ಮ ಅಪ್ಪ ನಾಯಿಗೆ ಊಟ ಕೊಡು ಎಂದು ಹೇಳುತ್ತಾರೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ವಿಧೇಯತೆ)

೧೧೩. ಸಭೆಯ ಶೌಚಾಲಯವನ್ನು ಶುಚಿ ಮಾಡಲು ಸಹಾಯ ಮಾಡುವಂತೆ ನಿಮ್ಮ ಅಮ್ಮ ಹೇಳುತ್ತಾರೆ, ಆದರೆ ಕೊಳಗಾಗಿರುವದರಿಂದ ನಿಮಗೆ ಇಷ್ಟವಿರುವದಿಲ್ಲ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ದೀನತೆ)

೧೧೪. ದೇವರೇ ಇಲ್ಲ ಎಂದು ಒಬ್ಬ ವ್ಯಕ್ತಿ ಹೇಳುವದನ್ನು ಟಿವಿಯಲ್ಲಿ ನೀವು ನೋಡುತ್ತೀರಬಹುದು. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ನಂಬಿಕೆ)

೧೧೫. ನೀವು ಕುಟುಂಬವಾಗಿ ವಿಹಾರಕ್ಕೆ ಹೋಗಿರುವಾಗ, ಒಬ್ಬ ಅಂಗವಿಕಲ ತಿನ್ನಲು ಕೊಡುವಂತೆ ಕೇಳುತ್ತಾನೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ಒಳ್ಳೇ ಹೃದಯ)

೧೧೬. ನಿಮ್ಮ ಸಭೆಯಲ್ಲಿ ಯಾರೋ ನಿಮ್ಮ ಮೇಲೆ ಸುಳ್ಳು ಆರೋಪ ಹೊರಿಸುತ್ತಾರೆ, ಸತ್ಯ ಹೊರಗೆ ಬರುವ ತನಕ ಕಾಯುವದನ್ನು ಬಿಟ್ಟರೆ ನಿಮ್ಮಿಂದ ಬೇರೇನೂ ಮಾಡಲು ಆಗುವದಿಲ್ಲ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ಧೈರ್ಯ)

೧೧೭. ನಿಮ್ಮ ಸಹೋದರ ತಮ್ಮ ನಿಮ್ಮ ಮನೆಗೆ ಮಲಗಲು ಬರುವಾಗ ನಿಮ್ಮ ಹಾಸಿಗೆಯನ್ನು ಅವನಿಗೆ ಕೊಡುವಂತೆ ಅಮ್ಮ ಹೇಳುತ್ತಾರೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ದೀನತೆ)

೧೧೮. ನೀವು ಕುಟುಂಬವಾಗಿ ಹೊಸ ಮನೆಗಾಗಿ ಪ್ರಾರ್ಥನೆ ಮಾಡುತ್ತಿರಬಹುದು. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ನಂಬಿಕೆ)

೧೧೯. ನೀವು ಬೇಸಿಗೆ ರಜೆಯಲ್ಲಿರುವಾಗ ನಿಮ್ಮ ತಾತ ಮನೆಯ ಮುಂದಿರುವ ತೋಟವನ್ನು ಶುಚಿ ಮಾಡುವಂತೆ ಹೇಳುತ್ತಾರೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ವಿಧೇಯತೆ)

೧೨೦. ನಿಮ್ಮ ಪಕ್ಕದ ಮನೆಯವರ ಮಗ ನಿಮ್ಮೆದುರು ಅಂಗಡಿಯಲ್ಲಿ ಕಳ್ಳತನ ಮಾಡುತ್ತಾನೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ಯಥಾರ್ಥತೆ)

೧೨೧. ನಿಮ್ಮ ಜೊತೆ ಓದುವ ಹುಡುಗನ ಬಳಿ ಫಲಾಹಾರ ಕೊಳ್ಳಲು ಹಣ ಇರುವದಿಲ್ಲ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ಒಳ್ಳೇ ಹೃದಯ)

೧೨೨. ಸಭೆಯಲ್ಲಿ ಪ್ರಸಂಗ ಮಾಡುವ ನಿಮ್ಮ ಸರದಿ ಬರುವಾಗ ನಿಮಗೆ ಬಹಳ ಗಾಬರಿಯಾಗುತ್ತದೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ನಂಬಿಕೆ)

೧೨೩. ನಿಮ್ಮ ಕೆಲವು ಸ್ನೇಹಿತರು ನಿಮ್ಮನ್ನು ನಿಮ್ಮ ತಂದೆತಾಯಿಗಳ ಅನುಮತಿಯಿಲ್ಲದೆ ಹೊರಗೆ ಕರಕೊಂಡು ಹೋಗಲು ಬಯಸುತ್ತಾರೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ಧೈರ್ಯ)

೧೨೪. ಸೋಮಾರಿತನದಿಂದ ಹೋಮ್ ವರ್ಕ್ ಮಾಡಲು ನಿಮಗೆ ಮನಸ್ಸೇ ಇರುವದಿಲ್ಲ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ವಿಧೇಯತೆ)

೧೨೫. ನಿಮ್ಮ ಸ್ನೇಹಿತನ ಪಾರ್ಟಿಯಲ್ಲಿ ಎಲ್ಲರೂ ಒಳ್ಳೆಯ ವಸ್ತ್ರಗಳನ್ನು ಧರಿಸಿಕೊಂಡಿರುತ್ತಾರೆ, ಅದರೆ ನಿಮಗೆ ಹೊಸ ವಸ್ತ್ರಗಳನ್ನು ಕೊಡಿಸುವಷ್ಟು ಸೌಕರ್ಯ ನಿಮ್ಮ ತಂದೆತಾಯಿಗಳಿಗೆ ಇರುವದಿಲ್ಲ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ದೀನತೆ)

೧೨೬. ಅಂಗಡಿಯವನು ಚಿಕ್ಕ ಹುಡುಗನಿಗೆ ಸರಿಯಾದ ಚಿಲ್ಲರೆ ಕೊಡದಿರುವದು ನಿಮಗೆ ಗೊತ್ತಾಗುತ್ತದೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ಯಥಾರ್ಥತೆ)

೧೨೭. ನಿಮ್ಮ ತರಗತಿಯಲ್ಲಿ ಓದುವವನು ಮತ್ತೊಬ್ಬನಿಗೆ ತೊಂದರೆ ಕೊಡುವಂತೆ ನಿಮಗೆ ಹೇಳುತ್ತಾನೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ಧೈರ್ಯ)

೧೨೮. ಶನಿವಾರ ಬೆಳಗ್ಗೆ ನಿಮ್ಮ ಅಜ್ಜಿತಾತ ನಿಮ್ಮನ್ನು ಭೇಟಿ ಮಾಡಲು ಬರುತ್ತಾರೆ. ಆದ್ದರಿಂದ ಅವರು ಬರುವ ಮೊದಲು ನಿಮ್ಮ ಕೋಣೆಯನ್ನು ಶುಚಿಮಾಡುವಂತೆ ನಿಮ್ಮ ಅಪ್ಪ ಅಮ್ಮ ನಿಮಗೆ ಹೇಳುತ್ತಾರೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ವಿಧೇಯತೆ)

೧೨೯. ಮೃಗಾಲಯದಲ್ಲಿರುವ ಪ್ರಾಣಿಗಳಿಗೆ ತೊಂದರೆ ಕೊಡಲು ನಿಮ್ಮ ಸ್ನೇಹಿತರು ಬಯಸುತ್ತಾರೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ಯಥಾರ್ಥತೆ)

೧೪೦. ಅಪ್ಪಾ ಅಮ್ಮಾ ನಿನ್ನನ್ನು ಬಹಳವಾಗಿ ಬೈಯುತ್ತಾರೆ ಯಾಕಂದರೆ ನೀನು ಅವರಿಗೆ ಇಷ್ಟವಿಲ್ಲ ಎಂದು ನಿಮ್ಮ ಅಣ್ಣ ನಿಮಗೆ ಹೇಳುತ್ತಾನೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ನಂಬಿಕೆ)

೧೪೧. ನಿಮಗೆ ಪ್ರಾಣಿಗಳನ್ನು ಕಂಡರೆ ಆಗುವದಿಲ್ಲ ಆದರೆ ನಿಮ್ಮ ಸ್ನೇಹಿತ ಪ್ರಾಣಿಗಳಿರುವ ಸ್ಥಳಕ್ಕೆ ಹೋಗೋಣ ಎಂದು ಹೇಳುತ್ತಾನೆ ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ಒಳ್ಳೇ ಹೃದಯ)

೧೪೨. ಮರೆತು ಹೋಗುವ ಕಾರಣ ಸಭೆಯಲ್ಲಿ ನಡೆಯುವ ಕಾರ್ಯಕ್ರಮಕ್ಕೆ ತಡವಾಗಿ ಹೋಗುವಾಗ ಶಿಕ್ಷಕಿ ಯಾಕೆ ತಡವಾಯಿತು ಎಂದು ಕೇಳಿದರೆ ಸುಳ್ಳು ಹೇಳುವ ಆಲೋಚನೆ ಬರುತ್ತದೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ಯಥಾರ್ಥತೆ)

೧೪೩. ಸಭೆಯಲ್ಲಿ ಹಾಡುವ ಸ್ಪರ್ಧೆ ಏರ್ಪಡಿಸಲಾಗಿರುತ್ತದೆ, ಅದರಲ್ಲಿ ಒಬ್ಬ ಹುಡುಗ ಚೆನ್ನಾಗಿ ಹಾಡಲಿಲ್ಲವೆಂದು ಎಲ್ಲರೂ ಅವನನ್ನು ಗೇಲಿ ಮಾಡುತ್ತಾರೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ಒಳ್ಳೇ ಹೃದಯ)

೧೪೪. ಮಕ್ಕಳ ಕೂಟದಲ್ಲಿ ಅನಾರೋಗ್ಯದಲ್ಲಿರುವ ತನ್ನ ಅಣ್ಣನಿಗಾಗಿ ಪ್ರಾರ್ಥಿಸುವಂತೆ ಒಬ್ಬ ಹುಡುಗಿ ಹೇಳುತ್ತಾಳೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ನಂಬಿಕೆ)

೧೪೫. ನದಿಯಲ್ಲಿ ಈಜುವದು ಅಪಾಯಕಾರಿ ಎಂದು ನಿಮ್ಮ ತಂದೆ ಹೇಳಿರುತ್ತಾರೆ ಆದರೆ ನಿಮ್ಮ ಸ್ನೇಹಿತರು ನದಿಯಲ್ಲಿ ಈಜಲು ನಿಮ್ಮನ್ನು ಕರೆಯುತ್ತಾರೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ವಿಧೇಯತೆ)

೧೪೬. ನಿಮ್ಮ ತಮ್ಮ ನಿಮ್ಮ ಮಾತನೇ ಕೇಳುವದಿಲ್ಲ ಆದರೆ ಅವನನ್ನು ಚೆನ್ನಾಗಿ ನೋಡಿಕೊಳ್ಳಬೇಕೆಂದು ಅಪ್ಪಾ ಹೇಳುತ್ತಾರೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ಧೈರ್ಯ)

೧೪೭. ನಿಮ್ಮ ಶಿಕ್ಷಕಿ ಬೋರ್ಡ್ ಮೇಲೆ ಬರೆದಿರುವದನ್ನು ಅಳಿಸುವಂತೆ ಹೇಳುತ್ತಾರೆ, ಆದರೆ ಅದು ನಿಮಗೆ ಇಷ್ಟವಿರುವದಿಲ್ಲ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ವಿಧೇಯತೆ)

೧೪೮. ನೆರೆಯವರನ್ನು ಗಾಬರಿಪಡಿಸಲು ನಿಮ್ಮ ಸ್ನೇಹಿತರು ನಿಮ್ಮನ್ನು ಕರೆಯುತ್ತಾರೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ಯಥಾರ್ಥತೆ)

೧೪೯. ನಿಮಗೆ ಒಬ್ಬರ ವಾಲೆಟ್ ಸಿಗುತ್ತದೆ ಅದನ್ನು ತೆರೆದಾಗ ಅದರಲ್ಲಿ ಅದು ಯಾರದ್ದೋ ಅವರ ವಿಳಾಸ ಇರುತ್ತದೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ಯಥಾರ್ಥತೆ)

೧೫೦. ನಿಮ್ಮೆದುರಿನಲ್ಲಿ ಒಬ್ಬ ವೃದ್ಧ ಭಾರವಾದ ಚೀಲ ಹೊತ್ತುಕೊಂಡು ಹೋಗುತ್ತಿರುತ್ತಾರೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ಒಳ್ಳೇ ಹೃದಯ)

೧೫೧. ಶಾಲೆಯ ಊಟದ ಸಮಯದಲ್ಲಿ ಮೊದಲು ಚಿಕ್ಕ ಮಕ್ಕಳಿಗೆ ನಂತರ ದೊಡ್ಡವರಿಗೆ ಬಡಿಸಲಾಗುವದು ಎಂದು ಹೇಳುತ್ತಾರೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ದೀನತೆ)

೧೫೨. ಪಡೆಯುವದಕ್ಕಿಂತ ಕೊಡುವದೇ ಉತ್ತಮ ಎಂಬದು ನಿಮ್ಮ ನಂಬಿಕೆ; ಆದರೆ ನಿಮ್ಮ ಸ್ನೇಹಿತರು ಇದನ್ನು ತಪ್ಪು ಎಂದು ಹೇಳುತ್ತಾರೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ನಂಬಿಕೆ)

೧೫೩. ಈ ಭಾನುವಾರ ಸಭೆಗೆ ಹೋಗುವದು ಬೇಡ ಎಂದು ನಿಮ್ಮ ಸ್ನೇಹಿತರು ಹೇಳುತ್ತಾರೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ಧೈರ್ಯ)

೧೫೪. ನಿಮ್ಮ ಪಕ್ಕದ ಮನೆಯವರು ಆಟವಾಡುವಾಗ ಚೆಂಡು ನಿಮ್ಮ ಕಾಂಪೌಂಡ್ ಒಳಗೆ ಬೀಳುತ್ತದೆ, ಆದರೆ ಅವರಿಗೆ ಅದು ಗೊತ್ತಿರುವದಿಲ್ಲ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ಯಥಾರ್ಥತೆ)

೧೫೫. ನಿಮ್ಮ ಸ್ನೇಹಿತನ ಮನೆಯಲ್ಲಿ ಕಳ್ಳತನವಾದ್ದರಿಂದ ಅವರಿಗೆ ಸಹಾಯದ ಅವಶ್ಯಕತೆ ಬಹಳವಿರುತ್ತದೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ಒಳ್ಳೇ ಹೃದಯ)

೧೫೬. ನೀವು ಟಿವಿಯಲ್ಲಿ ನೋಡುತ್ತಿರುವ ಕಾರ್ಯಕ್ರಮ ಹಿತವಲ್ಲವಾದ್ದರಿಂದ ಟಿವಿ ಆರಿಸುವಂತೆ ಅಪ್ಪ ಹೇಳುತ್ತಾರೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ವಿಧೇಯತೆ)

೧೫೭. ಸಭೆಯಲ್ಲಿ ನಿಮಗೆ ಉತ್ತಮವಾದ ಆಸನವಿರುತ್ತದೆ ಆದರೆ ಅದನ್ನು ಬೇರೆಯವರಿಗೆ ಬಿಟ್ಟು ಕೊಡುವಂತೆ ಸಭಾಪಾಲಕ ಹೇಳುತ್ತಾರೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ದೀನತೆ)

೧೫೮. ಸತ್ಯವೇದದ ಹೇಳುವದರಿಂದ ನೀವು ವಿಶೇಷವಾದವರು ಎಂಬ ಆಲೋಚನೆ ನಿಮ್ಮಲ್ಲಿರುತ್ತದೆ ಆದರೆ ಉಳಿದವರೆಲ್ಲರೂ ನಿಮ್ಮನ್ನು ಪ್ರಯೋಜನವಿಲ್ಲದವರು ಎಂದು ಹೇಳುತ್ತಾರೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ನಂಬಿಕೆ)

೧೫೯. ನಿಮ್ಮ ಸ್ನೇಹಿತರು ನಿಮ್ಮನ್ನು ಅಶ್ಲೀಲ ಚಿತ್ರ ವೀಕ್ಷಣೆಗೆ ಕರೆಯುತ್ತಾರೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ಧೈರ್ಯ)

೧೬೦. ನಿಮ್ಮ ಶಾಲೆಯಲ್ಲಿ ಯಾರದೋ ಪರ್ಸ್ ನಿಮಗೆ ಸಿಗುತ್ತದೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ಯಥಾರ್ಥತೆ)

೧೬೧. ನಿಮಗೆ ಹೊರಗೆ ಹೋಗಿ ನಿಮ್ಮ ಸ್ನೇಹಿತರೊಂದಿಗೆ ಆಟವಾಡಬೇಕೆಂದಿರುತ್ತದೆ ಆದರೆ ತಂಗಿಯನ್ನು ನೋಡಿಕೊಂಡು ಮನೆಯಲ್ಲಿಯೇ ಇರು ಎಂದು ನಿಮ್ಮ ಅಪ್ಪ ಹೇಳುತ್ತಾರೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ವಿಧೇಯತೆ)

೧೬೨. ನೀವು ತರಗತಿಯಲ್ಲಿ ನಿಮ್ಮ ಸ್ನೇಹಿತರೊಂದಿಗೆ ಕುಳಿತುಕೊಂಡಿರುವಾಗ, ನಿಮ್ಮ ಶಿಕ್ಷಕಿ ನಿಮ್ಮನ್ನು ಬೇರೆ ಕಡೆ ಕೂರಿಸುತ್ತಾರೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ದೀನತೆ)

೧೬೩. ನಿಮಗೆ ಹುಷಾರಿಲ್ಲದೆ ಪ್ರಾರ್ಥನೆ ಮಾಡುವಂತೆ ಸಭಾಪಾಲಕನಿಗೆ ಹೇಳುವಿರಿ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ನಂಬಿಕೆ)

೧೬೪. ನಿಮ್ಮ ಸ್ನೇಹಿತರು ವಯಸ್ಕ ಪತ್ರಿಕೆಯನ್ನು ತಂದು ಅದನ್ನು ನೋಡಲು ನಿಮ್ಮನ್ನು ಕರೆಯುತ್ತಾರೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ಧೈರ್ಯ)

೧೬೫. ಯಾರೋ ನಿಮಗೆ ಪೈರೇಟೆಡ್ ಸಿನೆಮಾಗಳನ್ನು ನೋಡಲು ಕೊಡುತ್ತಾರೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ಯಥಾರ್ಥತೆ)

೧೬೬. ನಿಮ್ಮ ಪಕ್ಕದ ಮನೆಯವರು ಕಾರನ್ನು ಎಷ್ಟೇ ತಳ್ಳಿದರೂ ಅದು ಸ್ಟಾರ್ಟ್ ಆಗದಿರುವದು ನಿಮಗೆ ಗೊತ್ತಾಗುತ್ತದೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ಒಳ್ಳೇ ಹೃದಯ)

೧೬೭. ನೀವು ನಿಮ್ಮ ಸಹೋದರರೊಂದಿಗೆ ಟೀವಿ ನೋಡುವಾಗ ಅಂಗಡಿಗೆ ಹೋಗುವಂತೆ ಅಮ್ಮ ಹೇಳುತ್ತಾರೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ವಿಧೇಯತೆ)

೧೬೮. ನೀವು ಆಟವಾಡುವಾಗ ಪಕ್ಕದ ಮನೆಯವರ ಗಿಡಗಳಲ್ಲಿ ಕೆಲವು ಮುರಿದು ಹೋಗುತ್ತವೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ದೀನತೆ)

೧೬೯. ನಿಮ್ಮ ಸತ್ಯವೇದ ತರಗತಿಯಲ್ಲಿ ಅನಾರೋಗ್ಯದಲ್ಲಿರುವವರಿಗೆ ಪ್ರಾರ್ಥನೆ ಮಾಡಲು ಶಿಕ್ಷಕಿ ಹೇಳುತ್ತಾರೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ನಂಬಿಕೆ)

೧೭೦. ನಿಮ್ಮ ಸ್ನೇಹಿತರು ತರಗತಿಯಲ್ಲಿ ಚೆನ್ನಾಗಿ ಓದುವ ಹುಡುಗನಿಗೆ ತೊಂದರೆ ಕೊಡಲು ನಿಮ್ಮನ್ನು ಕರೆಯುತ್ತಾರೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ಧೈರ್ಯ)

೧೭೧. ನಿಮ್ಮ ಅಮ್ಮ ಹೊರಗೆ ಹೋಗುವಾಗ ಚಿಲ್ಲರೆ ತೆಗೆದುಕೊಳ್ಳದೆ ಬಿಟ್ಟು ಹೋಗಿರುವದು ನಿಮಗೆ ಗೊತ್ತಾಗುತ್ತದೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ಯಥಾರ್ಥತೆ)

೧೭೨. ನಿಮ್ಮ ತಂಗಿ ಮರದಲ್ಲಿರುವ ಹಣ್ಣನ್ನು ಕಿತ್ತುಕೊಳ್ಳಲು ಬಯಸುತ್ತಾಳೆ ಆದರೆ ಅವಳಿಂದ ಆಗದಿರುವದು ನಿಮಗೆ ಗೊತ್ತಾಗುತ್ತದೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ಒಳ್ಳೇ ಹೃದಯ)

೧೭೩. ನಿಮ್ಮ ಅಮ್ಮ ಕಸ ಬಿಸಾಡುವಂತೆ ಹೇಳುತ್ತಾರೆ ಆದರೆ ನಿಮಗೆ ಇಷ್ಟವಿರುವದಿಲ್ಲ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ವಿಧೇಯತೆ)

೧೭೪. ನಿಮಗೂ ಮತ್ತು ನಿಮ್ಮ ತಂಗಿಗೂ ಕ್ಯಾಂಡಿ ಬೇಕಾಗಿರುತ್ತದೆ ಆದರೆ ಅಂಗಡಿಯಲ್ಲಿ ಒಂದು ಮಾತ್ರವೇ ಇರುತ್ತದೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ದೀನತೆ)

೧೭೫. ನಾವು ಹೊರಗೆ ಆಟವಾಡಲು ಹೋಗೋಣ ಎಂದು ನಿಮ್ಮ ಅಪ್ಪ ಹೇಳುತ್ತಾರೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ನಂಬಿಕೆ)

೧೭೬. ನಿಮ್ಮ ಸ್ನೇಹಿತರು ನಿಮ್ಮನ್ನು ಪಕ್ಕದ ಮನೆಯ ಮುಂದೆ ಆಡಲು ಕರೆಯುತ್ತಾರೆ ಆದರೆ ಆ ಮನೆಯವನಿಗೆ ನಿಮ್ಮನ್ನು ಕಂಡರೆ ಆಗಲುವದಿಲ್ಲ ಎಂದು ನಿಮಗೆ ಗೊತ್ತಿರುತ್ತದೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ಧೈರ್ಯ)

೧೭೭. ನಿಮ್ಮ ಸ್ನೇಹಿತನ ಬಳಿ ಅನೇಕ ವೀಡಿಯೋ ಗೇಮ್ ಗಳಿರುತ್ತವೆ ಅವುಗಳನ್ನು ಒಂದನ್ನು ಕದಿಯುವ ಆಲೋಚನೆ ನಿಮಗೆ ಬರುತ್ತದೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ಯಥಾರ್ಥತೆ)

೧೭೮. ನಿಮ್ಮ ಅಮ್ಮಾ ಒಬ್ಬರೇ ತೋಟದಲ್ಲಿ ಕೆಲಸ ಮಾಡುವದು ನಿಮಗೆ ಗೊತ್ತಾಗುತ್ತದೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ಒಳ್ಳೇ ಹೃದಯ)

೧೭೯. ನಿಮ್ಮ ಸ್ನೇಹಿತರು ಆಡಲು ಬಂದಿರುತ್ತಾರೆ ಆದರೆ ಹೋಮ್ ವರ್ಕ್ ಮುಗಿಸುವ ತನಕ ಹೋಗಬಾರದೆಂದು ಅಮ್ಮಾ ಹೇಳುತ್ತಾರೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ವಿಧೇಯತೆ)

೧೮೦. ನಿಮ್ಮ ಅಪ್ಪಾ ಏನೋ ಮಾಡಲು ಹೇಳುತ್ತಾರೆ ಆದರೆ ಮಾಡಿಲ್ಲವಾದ್ದರಿಂದ ಈಗ ಬೈಯುತ್ತಾರೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ದೀನತೆ)

೧೮೧. ನಿಮ್ಮ ಅಜ್ಜಿ ಆಸ್ಪತ್ರೆಯಲ್ಲಿರುತ್ತಾರೆ ಆದರೆ ಎಲ್ಲರೂ ಆಕೆಗೆ ಗುಣವಾಗುವದೆಂದು ಹೇಳುತ್ತಾರೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ಧೈರ್ಯ)

೧೮೨. ಯಾರೋ ಪರಿಚಯವಿಲ್ಲದವರು ಬಂದು ಸಹಾಯ ಮಾಡುವಂತೆ ಹೇಳುತ್ತಾರೆ ಮತ್ತು ನಿಮಗೆ ಉಡುಗೊರೆ ಕೊಡುವದಾಗಿ ಹೇಳುತ್ತಾರೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ಧೈರ್ಯ)

೧೮೩. ಮನೆಯಲ್ಲಿ ಒಂದು ಕೇಕ್ ಇರುತ್ತದೆ ಅದು ನಿಮ್ಮ ತಮ್ಮನ ಪಾಲು ಎಂದು ಗೊತ್ತಿದ್ದರೂ ಅದನ್ನು ತೆಗೆದುಕೊಳ್ಳಬೇಕೆಂದು ನಿಮಗೆ ಅನ್ನಿಸುತ್ತದೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ಯಥಾರ್ಥತೆ)

೧೮೪. ಒಬ್ಬ ವೃದ್ಧ ಸ್ತ್ರೀ ಭಾರವಾದ ಚೀಲವನ್ನು ಹೊತ್ತುಕೊಂಡು ಹೋಗುತ್ತಿರುತ್ತಾರೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ಒಳ್ಳೇ ಹೃದಯ)

೧೮೫. ನಿಮ್ಮ ತಂದೆತಾಯಿ ಬೇಗ ಮಲಗುವ ಸಲುವಾಗಿ ಹೆಚ್ಚು ಹೊತ್ತು ಟಿವಿ ನೋಡಬಾರದೆಂದು ಹೇಳಿದ್ದಾರೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ವಿಧೇಯತೆ)

೧೮೬. ನಿಮ್ಮ ಜೊತೆಯಲ್ಲಿ ಓದುವವನು ನಿಮಗೆ ತೊಂದರೆ ಕೊಡುತ್ತಾನೆ ಆದರೆ ಅವನಿಗೆ ತೊಂದರೆ ಕೊಡಲು ನಿಮಗೆ ಇಷ್ಟವಿರುವದಿಲ್ಲ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ದೀನತೆ)

೧೮೭. ನೀವು ಸಭೆಗೆ ಹೋಗಬಾರದೆಂದು ನಿಮ್ಮ ಸ್ನೇಹಿತ ನಿಮಗೆ ಹೇಳುತ್ತಾನೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ನಂಬಿಕೆ)

೧೮೮. ನಿಮ್ಮ ಸ್ನೇಹಿತರು ಒಬ್ಬನನ್ನು ತೋರಿಸಿ ಅವನ ಬ್ಯಾಗ್ ನೊಳಗೆ ಜಿರಳೆ ಬಿಡಲು ಹೇಳುತ್ತಾರೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ಧೈರ್ಯ)

೧೮೯. ನಿಮ್ಮ ಮನೆಯಲ್ಲಿರುವವರೇ ಯಾರೋ ಒಂದು ಬಾಕ್ಸ್ ತುಂಬಾ ಕ್ರಯಾನ್ಸ್ ಇಟ್ಟಿರುತ್ತಾರೆ, ಆದರೆ ಅದು ಯಾರದ್ದು ಎಂಬದು ನಿಮಗೆ ಗೊತ್ತಿರುವದಿಲ್ಲ, ಈಗ ಅವುಗಳ ಅವಶ್ಯಕತೆ ನಿಮಗಿರುತ್ತದೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ಯಥಾರ್ಥತೆ)

೧೯೦. ನಿಮ್ಮ ಶಾಲೆಯಲ್ಲಿರುವ ಚಿಕ್ಕ ಹುಡುಗ ಎಷ್ಟೇ ಪ್ರಯತ್ನಪಟ್ಟರೂ ಉಯ್ಯಾಲೆಯಲ್ಲಿ ಕೂರಲು ಆಗದೆ ಕಷ್ಟಪಡುತ್ತಿರುತ್ತಾನೆ, ಅದು ನಿಮಗೆ ಗೊತ್ತಾಗುತ್ತದೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ಒಳ್ಳೇ ಹೃದಯ)

೧೯೧. ನಿನ್ನ ಹಾಸಿಗೆಯನ್ನು ನೀನೇ ಸಿದ್ಧಮಾಡಬೇಕು ಎಂದು ನಿನ್ನ ಅಮ್ಮಾ ಹೇಳುತ್ತಾರೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ವಿಧೇಯತೆ)

೧೯೨. ನಿಮ್ಮ ಅಪ್ಪ ನಿಮ್ಮನ್ನು ಬೈದಿರುತ್ತಾರೆ ಆದರೆ ಈಗ ನಿಮ್ಮನ್ನು ತಬ್ಬಿಕೊಳ್ಳಲು ಬರುತ್ತಾರೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ದೀನತೆ)

೧೯೩. ದೇವರು ನಿನ್ನನ್ನು ಕೈಬಿಟ್ಟಿದ್ದಾನೆ ಎಂದು ನಿನ್ನ ಸ್ನೇಹಿತರು ಹೇಳುತ್ತಾರೆ ಆದರೆ ಸತ್ಯವೇದ ಹೇಳುತ್ತದೆ ಆತನು ಎಲ್ಲಾ ದಿವಸ ನಿನ್ನ ಜೊತೆಯಲ್ಲಿರುತ್ತಾನೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ನಂಬಿಕೆ)

೧೯೪. ಸಭೆಗೆ ಬೆಲ್ ಹೊಡೆಯುವಂತೆ ನಿಮ್ಮ ಸ್ನೇಹಿತರು ನಿಮ್ಮನ್ನು ಒತ್ತಾಯಪಡಿಸುತ್ತಾರೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ಧೈರ್ಯ)

೧೯೫. ಅಂಗಡಿಗೆ ಬರುವ ಯಾರೋ ಹಣ ಬೀಳಿಸಿಕೊಂಡು ಹೋಗುವದು ನಿಮಗೆ ಗೊತ್ತಾಗುತ್ತದೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ಯಥಾರ್ಥತೆ)

೧೯೬. ಆಟವಾಡುತ್ತಿರುವ ಹುಡುಗ ಜಾರಿ ಬೀಳುತ್ತಾನೆ, ಆದರೆ ಅವನಿಗೆ ಸಹಾಯ ಮಾಡಲು ಯಾರೂ ಹೋಗುವದಿಲ್ಲ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ಒಳ್ಳೇ ಹೃದಯ)

೧೯೭. ನಿಮ್ಮ ಅಮ್ಮಾ ಕಾರಿನಲ್ಲಿ ಹೋಗುವಾಗ ಸೀಟ್ ಬೆಲ್ಟ್ ಹಾಕುವಂತೆ ಹೇಳುತ್ತಾರೆ ಆದರೆ ಯಾರೂ ಹಾಕಿಕೊಳ್ಳುವದಿಲ್ಲ ಎಂದು ನಿಮಗೆ ಗೊತ್ತಿರುತ್ತದೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ವಿಧೇಯತೆ)

೧೯೮. ನಿಮ್ಮಿಂದ ತೊಂದರೆಯಾಗಿರುವ ಕಾರಣ ಪಕ್ಕದ ಮನೆಯವರ ಹತ್ತಿರ ಕ್ಷಮಾಪಣೆ ಕೇಳುವಂತೆ ನಿಮ್ಮ ಅಪ್ಪಾ ಹೇಳುತ್ತಾರೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ದೀನತೆ)

೧೯೯. ನನಗೆ ಒಳ್ಳೇ ಅಂಕ ಪಡೆಯಲು ಆಗುವದಿಲ್ಲ ಎಂಬದು ನಿಮ್ಮ ಅನಿಸಿಕೆ ಆದರೆ ದೇವರನ್ನು ಪ್ರಾರ್ಥಿಸಿದರೆ ಆತನು ಒಳ್ಳೇ ಜ್ಞಾನ ಕೊಡುತ್ತಾನೆಂದು ನಿಮ್ಮ ಅಮ್ಮ ಹೇಳುತ್ತಾರೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ನಂಬಿಕೆ)

೧೦೦. ನಿಮ್ಮ ಸತ್ಯವೇದ ತರಗತಿ ಪ್ರಾರಂಭವಾಗುವ ಸಮಯಕ್ಕೆ ಸರಿಯಾಗಿ ನಿಮಗಿಷ್ಟದ ಚಲನಚಿತ್ರ ಟಿವಿಯಲ್ಲಿ ಪ್ರಸಾರವಾಗುತ್ತದೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ಧೈರ್ಯ)

೧೦೧. ನಿಮಗಿಷ್ಟ ಮಾಸ ಪತ್ರಿಕೆ ಅಂಗಡಿಯಲ್ಲಿರುತ್ತದೆ ಅದರೆ ಕೊಳ್ಳುವಷ್ಟು ಸೌಕರ್ಯ ನಿಮಗಿರುವದಿಲ್ಲ. ಆಗ ಅದನ್ನು ಕದ್ದುಕೊಳ್ಳುವ ಆಲೋಚನೆ ಬರುತ್ತದೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ಯಥಾರ್ಥತೆ)

೧೦೨. ನಿಮ್ಮ ತಂಗಿಯ ಸಾಕುಪ್ರಾಣಿಗೆ ಗಾಯವಾಗಿರುವದರಿಂದ ಸಹಾಯ ಮಾಡುವಂತೆ ಕೇಳಲು ನಿಮ್ಮ ಅಕ್ಕ ಅಳುತ್ತಾ ನಿಮ್ಮ ಬಳಿಗೆ ಬರುತ್ತಾಳೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ಒಳ್ಳೇ ಹೃದಯ)

೧೦೩. ಅಪರಿಚಿತರೊಂದಿಗೆ ಮಾತನಾಡಬಾರದೆಂದು ನಿಮ್ಮ ತಂದೆತಾಯಿ ನಿಮಗೆ ಹೇಳಿರುತ್ತಾರೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ವಿಧೇಯತೆ)

೧೦೪. ಕಾರ್ ತೆಗೆದುಕೊಂಡು ಹೋಗಿ ಬಂದ ಸಹೋದರ ಅದನ್ನು ಒರೆಸದೆ ಹಾಗೇ ಬಿಟ್ಟಿರುತ್ತಾನೆ ಅದನ್ನು ಒರೆಸುವಂತೆ ನಿಮ್ಮ ಅಪ್ಪ ನಿಮಗೆ ಹೇಳುತ್ತಾರೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ದೀನತೆ)

೧೦೫. ದೇವರು ನಿಮ್ಮೊಂದಿಗಿದ್ದಾನೆ ಮತ್ತು ಯಾವಾಗಲೂ ನಿಮಗೆ ಸಹಾಯ ಮಾಡುತ್ತಾನೆ ಎಂದು ಸತ್ಯವೇದ ಹೇಳುತ್ತದೆ. ಯಾವ ವೀರ ನಿಮಗೆ ಸಹಾಯ ಮಾಡುತ್ತಾನೆ? (ನಂಬಿಕೆ)